ಇಡುತ್ತೇವೆ. ಮತ್ತು ಇದಕ್ಕೆ ಬೇಕಾದ ಎಲ್ಲಾ ವ್ಯವಸ್ಥೆಗಳನ್ನು ಸಕಾರಾತ್ಮಕ ದೃಷ್ಟಿಯಿಂದ ನಾವು ಮಾಡುತ್ತೇವೆ ಎನ್ನುವಂತಹ ಮಾತನ್ನು ಹೇಳಿ, ರಾಜ್ಯದ ಜನ ಆತಂಕಕ್ಕೀಡಾಗಬಾರದು, ಯಾವುದೇ ರೀತಿಯಲ್ಲಿ ಕಾನೂನನ್ನು ಕೈಗೆತ್ತಿ ಕೊಳ್ಳುವಂತಹ ಕೆಲಸ ಕಾರ್ಯಗಳು ಆಗಬಾರದು ಎಂದು ಹೇಳುವುದನ್ನು ಈ ಸದನದ ಮುಖಾಂತರ ರಾಜ್ಯದ ಜನತೆಯಲ್ಲಿ ವಿನಂತಿ ಮಾಡಿ ಕೊಳ್ಳುತ್ತೇನೆ.

10. ನಿಯಮ 69ರ ಮೇರೆಗೆ ಚರ್ಚೆ :

ವಿಷಯ : NREGS ಗೆ ಅನುದಾನ ಕಡಿಮೆ ಆಗಿರುವ ಬಗ್ಗೆ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ನಾನು ಮೊದಲು ಮಾತನಾಡುತ್ತಿದ್ದೆ, ಬಚ್ಚೇಗೌಡರು NREGS ನಲ್ಲಿ ಕೇಂದ್ರ ಸರ್ಕಾರ ಹಣ ಕಡಿಮೆ ಮಾಡಿದೆ ಎಂದು ಹೇಳಿದರು. ನಾನು ಸುಮ್ಮನೆ ನಿಮ್ಮ ಗಮನಕ್ಕೆ ತರುತ್ತೇನೆ. ಕೇಂದ್ರ ಸರ್ಕಾರ ಹಣ ಕಡಿಮೆ ಮಾಡಿಲ್ಲ. ಹಣ ಕಡಿಮೆ ಆಗುವುದಕ್ಕೆ ನೀವು ಕಾರಣಕರ್ತರಾಗಿದ್ದೀರಿ. ಇದಕ್ಕೆ ಸರ್ಕಾರ ಹೊಣೆ. NREGS ಪ್ರಾರಂಭವಾದ ಮೇಲೆ Economic Survey ಯಲ್ಲಿ ಸರ್ಕಾರವೇ ಹೇಳಿರುವುದು. 2006–07ರಲ್ಲಿ ರೂ.341 ಕೋಟಿ ನಿಮಗೆ ಖರ್ಚು ಮಾಡುವುದಕ್ಕೆ ಇದ್ದ ಫಂಡ್ಸ್. ಖರ್ಚು ಮಾಡಿದ್ದು ರೂ.251 ಕೋಟಿ. 2007–08ರಲ್ಲಿ 419 ಕೋಟಿ funds available ಇತ್ತು. ಖರ್ಚು ಮಾಡಿದ್ದು ರೂ.236 ಕೋಟಿ. 2008–09ರಲ್ಲಿ ರೂ.547 ಕೋಟಿ ಫಂಡ್ಸ್ ಇತ್ತು. ಖರ್ಚು ಮಾಡಿದ್ದು ರೂ.237 ಕೋಟಿ. ಇನ್ನೂ 200 ಕೋಟಿ ಖರ್ಚು ಮಾಡಲಿಲ್ಲ. 2009–10ರಲ್ಲಿ 3026 ಕೋಟಿ funds available ಇತ್ತು. ಖರ್ಚು ಮಾಡಿದ್ದು 2569 ಕೋಟಿ ರೂಪಾಯಿಗಳು. 2010–11 ರಲ್ಲಿ 2,349 ಕೋಟಿ ರೂ.ಗಳು ಇತ್ತು. ಖರ್ಚು ಮಾಡಿರುವುದು 2,081 ಕೋಟಿಗಳು. ನೀವು ಖರ್ಚು ಮಾಡಲಿಲ್ಲವೆಂದು ಈ ವರ್ಷಕ್ಕೆ 1,841 ಕೋಟಿಗಿಳಿಸಿದ್ದಾರೆ. ಎಲ್ಲವನ್ನೂ ತೆಗೆದುಕೊಂಡರೆ ನೀವು ಖರ್ಚು ಮಾಡಿರುವುದು ಡಿಸೆಂಬರ್ ಅಂತ್ಯದವರೆಗೆ 1,162 ಕೋಟಿ. ವರ್ಷ ವರ್ಷ ಏಕೆ ಕಡಿಮೆಯಾಯಿತು ಎಂದರೆ, ಇವರು ಹಣವನ್ನು ಖರ್ಚು ಮಾಡಲಿಲ್ಲ. 2010–11ರಲ್ಲಿ 3,000 ಕೋಟಿ ರೂ.ಗಳನ್ನು ಕೇಂದ್ರ ಸರ್ಕಾರ ಕೊಟ್ಟಿರುವಾಗ 2011–12ರಲ್ಲಿ ಏಕೆ ಕಡಿಮೆ ಮಾಡುತ್ತಾರೆ? ಏಕೆಂದರೆ, ನಿಮಗೆ ಕೇಂದ್ರ ಸರ್ಕಾರ ಕೊಟ್ಟ

ಹಣವನ್ನು ಖರ್ಚು ಮಾಡತ್ಕಕಂಥ ಶಕ್ತಿ ಇಲ್ಲ. ರಾಜಕೀಯ ಇಚ್ಛಾಶಕ್ತಿ ಇಲ್ಲ. ಜನರಿಗೆ ಕೆಲಸವನ್ನು ಕೊಡಬೇಕು ಎನ್ನತಕಂಥದ್ದು ಇವರಲ್ಲಿ ಇಲ್ಲ. ಆಮೇಲೆ ಇವರು 125 ರೂ.ಗಳಿಗೆ ಕೆಲಸಕ್ಕೆ ಯಾರೂ ಬರುವುದಿಲ್ಲವೆನ್ನುತ್ತಾರೆ. ಆದರೆ, 3,000 ಕೋಟಿ ರೂ.ಗಳನ್ನು ಖರ್ಚು ಮಾಡಿದಾಗ ಎಲ್ಲಿಂದ ಬಂದಿದ್ದರು? ಇವತ್ತು ಇದ್ದಕ್ಕಿದ್ದ ಹಾಗೆ ಅವರೆಲ್ಲರೂ ಹೊರಟುಹೋದರೆ? ಅವರು ಬರದೇ ಹೋದರೆ? ಒಂದು ವೇಳೆ ಇನ್ನೂ ಹೆಚ್ಚಾಗಿ ಕೊಡಬೇಕು ಎಂದರೆ ಸರ್ಕಾರದಿಂದ ಕೊಡಿ. ಕೇಂದ್ರ ಸರ್ಕಾರ 125 ರೂ.ಗಳನ್ನು ಕೊಡುವಾಗ ರಾಜ್ಯ ಸರ್ಕಾರದವರು ಕೂಡ 25 ರೂ.ಗಳನ್ನು ಸೇರಿಸಿ ಕೊಡಿ. ಇದಕ್ಕಾಗಿ ಬಜೆಟ್‌ನಲ್ಲಿ ಪ್ರೊವೈಡ್ ಮಾಡಿಕೊಳ್ಳಿ. ನೀವು ಜನರಿಗೆ ಕೆಲಸವನ್ನು ಕೊಡಬೇಕು. ನಾನು ಏಕೆ ಇದನ್ನು ಹೇಳುತ್ತೇನೆಂದರೆ, ಜನರಿಗೆ ಮೊದಲು ಕೆಲಸವನ್ನು ಕೊಡಬೇಕು. ಈಗ ಬರಗಾಲ, ಆದುದರಿಂದ ಕೇಂದ್ರ ಸರ್ಕಾರ 125 ರೂ.ಗಳನ್ನು ಕೊಡುವುದರ ಜೊತೆಗೆ ನೀವು ಕೂಡ 25 ರೂಪಾಯಿ ಕೊಡಿ. ಜನಗಳು ಗುಳೆ ಹೋಗುವುದನ್ನು ತಡೆಯಿರಿ. ನೋಡಿ, ಬರಗಾಲ ಇಷ್ಟೊಂದು ತೀವ್ರವಿರುವಾಗ, ಬೇರೆ ಕೆಲಸಗಳನ್ನೆಲ್ಲ ನಿಲ್ಲಿಸಿ ಇದಕ್ಕೆ ಹಣವನ್ನು ಖರ್ಚು ಮಾಡಬೇಕು. ಕುಡಿಯುವ ನೀರಿಗೆ, ಕೆಲಸ ಕೊಡುವುದಕ್ಕೆ, ಮೇವಿಗೆ, ಜನಗಳಿಗೆ ಔಷಧ ಕೊಡುವುದಕ್ಕೆ, ಜಾನುವಾರುಗಳಿಗೆ ಕಾಯಿಲೆ ಬಂದರೆ ಅದನ್ನು ವಾಸಿ ಮಾಡುವುದಕ್ಕೆ ಇಂಥವುಗಳಿಗೆ ನೀವು ಹಣವನ್ನು ಕೊಡಬೇಕು. ಈ ಕೆಲಸಗಳನ್ನು ಯುದ್ಧೋಪಾದಿಯಲ್ಲಿ ನೀವು ಮಾಡಬೇಕು. ಈ ರೀತಿ ಒಂದೇ ಒಂದು ಕೆಲಸ ಮಾಡಿರುವುದನ್ನು ನೀವು ತೋರಿಸಿ ನೋಡೋಣ. ಬರಗಾಲ ಇಷ್ಟೊಂದು ತೀವ್ರವಾಗಿರುವಾಗ ಯುದ್ಧೋಪಾದಿಯಲ್ಲಿ ಕೆಲಸಗಳನ್ನು ಮಾಡಿರುವಂಥದ್ದಕ್ಕೆ ನೀವು ಒಂದೇ ಒಂದು ಉದಾಹರಣೆಯನ್ನು ತೋರಿಸಿ ನೋಡೋಣ? The very fact that, ರಾಜ್ಯದಲ್ಲಿ ಇಷ್ಟೊಂದು ಬರಗಾಲವಿರುವಾಗ ಇವರು ಗೋಲ್ಡನ್ ಪಾಮ್ ರೆಸಾರ್ಟ್‌ಗೆ ಹೋಗುತ್ತಾರೆ, ಮಂತ್ರಿಗಳು ಮತ್ತು ಶಾಸಕರುಗಳು ದೆಹಲಿಗೆ ಹೋಗುತ್ತಾರೆಂದರೆ, How serious this Government is? Not an iota of seriousness is there in your Government. ನೀವೇನು ಮಾಡಿದ್ದೀರಿ? ನಾವು ಎನ್‌ಆರ್‌ಇಜಿಎಸ್‌ನಲ್ಲಿ ದುಡ್ಡು ಬಂದಿದೆ, ಅದರಲ್ಲಿ ಹಣವನ್ನು ಖರ್ಚು ಮಾಡುತ್ತಿದ್ದೇವೆ ಮತ್ತು ಆ ಹಣದಲ್ಲಿ ಜನರಿಗೆ ಕೆಲಸವನ್ನು ಕೊಡುತ್ತಿದ್ದೇವೆ ಎನ್ನುತ್ತೀರಿ. ಜನರಿಗೆ ಕೆಲಸ ಕೊಡುವುದಕ್ಕೆ ನಿಮ್ಮ

ಹತ್ತಿರ ದುಡ್ಡೆಲ್ಲಿದೆ? Where is the money available to you? Where is the additional money you have provided? No. ಪ್ರತಿ ಬಾರಿಯೂ ಎನ್‌ಆರ್‌ಇಜಿಎಸ್‌ನಲ್ಲಿ ದುಡ್ಡಿದೆ ಎಂದು ಇದೇ ರೀತಿ ಉತ್ತರವನ್ನು ಹೇಳುತ್ತಾರೆ. ಆಮೇಲೆ ಕುಡಿಯುವ ನೀರಿನ ಬಗ್ಗೆ ಹೇಳಬೇಕೆಂದರೆ, ಕುಡಿಯುವ ನೀರಿಗಾಗಿ ಸೆಪರೇಟ್ ಆಗಿ ಹಣವನ್ನು ಎಲ್ಲಿ ಕೊಟ್ಟಿದ್ದೀರಿ? ಇವತ್ತು ಎಲ್ಲಾದರೂ ಒಂದು ಬೋರ್‌ಗೆ ಹೊಸದಾಗಿ ಆ ಭಾಗದಲ್ಲಿರತಕ್ಕಂಥ ಎಂ.ಎಲ್.ಎ. ಗಳು, ಈ ಭಾಗದಲ್ಲಿರತಕ್ಕಂಥ ಎಂ.ಎಲ್.ಎ. ಗಳು ತೋಡಿಸುವುದಕ್ಕೆ ಹೋಗೋಣವೆಂದರೆ ಗ್ರಾಮ ಪಂಚಾಯತಿಯಲ್ಲಿ ದುಡ್ಡಿದೆಯೆ ಎಂದರೆ ಅಲ್ಲಿಯೂ ದುಡ್ಡಿಲ್ಲ, ತಾಲ್ಲೂಕು ಪಂಚಾಯತಿಯಲ್ಲಿ ದುಡ್ಡಿದೆಯೆ? ಇಲ್ಲ, ಜಿಲ್ಲಾ ಪಂಚಾಯತಿಯಲ್ಲಿ ದುಡ್ಡಿದೆಯೆ? ಇಲ್ಲ. That is what you are doing.

ಶ್ರೀ ಬಂಡೆಪ್ಪ ಖಾಶೆಂಪೂರ್ : ನನ್ನ ಫಂಡ್‌ನಿಂದ 25 ಲಕ್ಷ ರೂಪಾಯಿಗಳನ್ನು ಬೋರ್‌ವೆಲ್ ತೋಡಿಸುವುದಕ್ಕಾಗಿ ಕೊಟ್ಟಿದ್ದೇನೆ.

ಶ್ರೀ ಸಿದ್ದರಾಮಯ್ಯ : ನೋಡಿ, ಪಾಪ, ಶಾಸಕರು ಜನಗಳನ್ನು ಸಮಾಧಾನ ಮಾಡುವುದಕ್ಕೋಸ್ಕರ ಅವರ ನಿಧಿಯಿಂದ ಹಣವನ್ನು ಬೋರ್‌ವೆಲ್ ತೋಡಿಸುವುದಕ್ಕೋಸ್ಕರ ಕೊಟ್ಟಿದ್ದಾರೆ. ಡೆಪ್ಯುಟಿ ಲೀಡರ್ 80 ಲಕ್ಷ ರೂ.ಗಳನ್ನು ಬೋರ್‌ವೆಲ್ ತೋಡಿಸುವುದಕ್ಕೋಸ್ಕರ ಕೊಟ್ಟಿದ್ದಾರೆ. ಬೇರೆ ಬೇರೆ ಶಾಸಕರುಗಳೂ ಕೂಡ ಅದೇ ರೀತಿ ಹಣವನ್ನು ಕೊಟ್ಟಿದ್ದಾರೆ. ಪಾಪ, ಪಶುಸಂಗೋಪನಾ ಸಚಿವರಾದ ಮಾನ್ಯ ಬೆಳಮಗಿಯವರ ಬಗ್ಗೆ ನನಗೆ ಗೌರವವಿದೆ. ಪಾಪ, ಅವರು ರೆಸಾರ್ಟ್‌ಗೆ ಹೋಗಿಬಿಟ್ಟು, ಮೇವು ಬೆಳೆದು ಕೊಡಬೇಕಾದ ಪಶುಸಂಗೋಪನಾ ಸಚಿವರು ಹೇಳುತ್ತಾರೆ, ಪತ್ರಿಕೆಯವರು ಸುಮ್ಮನೆ ಏಕೆ ರೆಸಾರ್ಟ್‌ಗೆ ಬಂದಿದ್ದೀರಿ ಎಂದು ಕೇಳಿದರೆ, ಕ್ಷೇತ್ರದಲ್ಲಿದ್ದರೆ ಜನಗಳು ನೀರು ಕೇಳುತ್ತಾರೆ, ರಸ್ತೆ ಕೇಳುತ್ತಾರೆ, ಇನ್ನೇನೋ ಕೇಳುತ್ತಾರೆ, ಅದಕ್ಕೋಸ್ಕರ ನಾನು ಈ ಕಡೆ ಬಂದುಬಿಟ್ಟಿದ್ದೇನೆಂದು ಹೇಳುತ್ತಾರೆ! ಬಹುಶಃ ಸತ್ಯವೂ ಇರಬಹುದು. ಪಾಪ ಅವರೊಬ್ಬ ಮಂತ್ರಿಯಾಗಿ ಅವರ ಕ್ಷೇತ್ರದಲ್ಲಿಯೇ ಕುಡಿಯುವ ನೀರು ಒದಗಿಸಲು ದುಡ್ಡಿಲ್ಲ, ಮೇವಿಗೆ ದುಡ್ಡಿಲ್ಲ, ರಸ್ತೆಗಳಿಗೆ ದುಡ್ಡಿಲ್ಲ, ಜನಗಳಿಗೆ ಕೆಲಸ ಕೊಡುವುದಕ್ಕೆ ದುಡ್ಡಿಲ್ಲವೆಂದರೆ ಪಾಪ ಅವರು ತಾನೆ ಏನು ಮಾಡುತ್ತಾರೆ ಹೇಳಿ? ನಾನು ಪತ್ರಿಕೆಯಲ್ಲಿ ನೋಡಿದೆ, ರೆಸಾರ್ಟ್‌ನಲ್ಲಿ the Excise DC says, seized liquor was for Renuka!

ಏನು ಸ್ವಾಮಿ, ಕರ್ನಾಟಕದ ಇತಿಹಾಸದಲ್ಲಿ ಏನೇನು ಆಗಬಾರದೋ ಅವೆಲ್ಲವೂ ಇವರ ಕಾಲದಲ್ಲಿ ಆಗಿಹೋಯಿತಲ್ಲ. ಬಚ್ಚೇಗೌಡರೆ, ನೀವೆನೂ ರೆಸಾರ್ಟ್‌ಗೆ ಹೋಗಿರಲಿಲ್ಲ ಅಲ್ಲವೆ? ಇಲ್ಲಿ ಮೋಹನ್ ಕುಮಾರ್ ಎನ್ನುವ ಒಬ್ಬ ಎಕ್ಸೈಸ್ ಡಿ.ಸಿ.ಯ ಕಛೇರಿಯಲ್ಲಿ ಲೋಕಾಯುಕ್ತದವರು ಸರ್ಚ್ ಮಾಡಿದ್ದಾರೆ. ಸರ್ಚ್ ಮಾಡಿದಾಗ ಬ್ಲ್ಯಾಕ್ ಲೇಬಲ್, ಜಾನಿ ವಾಕರ್, ರಾಯಲ್ ಸಲ್ಯೂಟ್, ಶಿವಾಸ್ ಈಗಲ್, ರೆಡ್ ಲೇಬಲ್, ಬ್ಲೂ ಲೇಬಲ್, ಹೀಗೆ ಎಲ್ಲ ಲೇಬಲ್‌ಗಳದ್ದೂ 20 ಬಾಟಲ್‌ಗಳು ಸಿಕ್ಕಿದೆ.

ಶ್ರೀ ಡಿ.ಎನ್. ಜೀವರಾಜ್ : ಮಾನ್ಯ ಅಧ್ಯಕ್ಷರೆ, ಸಿದ್ದರಾಮಯ್ಯನವರು ಹೇಳುತ್ತಿರುವುದು ಸರಿ ಇದೆ. ಆದರೆ 21ಕ್ಕೆ ರೆಸಾರ್ಟ್‌ನಿಂದ ಅವರು ವಾಪಸ್ ಬಂದಿದ್ದಾರೆ. ಆ ಅಧಿಕಾರಿ ಸಿಕ್ಕಿಹಾಕಿಕೊಂಡಿರುವುದು ದಿನಾಂಕ 22ಕ್ಕೆ. ಯಾರೋ ಒಬ್ಬ ಅಧಿಕಾರಿ ಈ ರೀತಿ ಹೇಳಿದ ಎಂದ ತಕ್ಷಣ ಏಕಾಏಕಿ ತಾವು ಹಿರಿಯರಾದವರು ಈ ರೀತಿ ಹೇಳಬಾರದು.

ಶ್ರೀ ಸಿದ್ದರಾಮಯ್ಯ : ನೋಡಪ್ಪಾ ಶೃಂಗೇರಿ ಎಂ.ಎಲ್.ಎ. ರವರೆ, ನೀವು ಏಕೆ ಸಚಿವರನ್ನು ಡಿಫೆಂಡ್ ಮಾಡುವುದಕ್ಕೆ ಹೋಗುತ್ತೀರಿ? ಬೇಲ್ ಅಪ್ಲಿಕೇಶನ್‌ನಲ್ಲಿ ಡಿ.ಸಿ.ಯವರೇ ಬರೆದುಬಿಟ್ಟಿದ್ದಾರೆ.

ಶ್ರೀ ಡಿ.ಎನ್ ಜೀವರಾಜ್ : ಅದನ್ನೇ ನಾನು ಹೇಳಿದ್ದು. ಯಾರೋ ಒಬ್ಬ ಅಧಿಕಾರಿ ಉಳಿದುಕೊಳ್ಳಲು ಮಂತ್ರಿಯವರ ಹೆಸರನ್ನು, ಚುನಾಯಿತ ಪ್ರತಿನಿಧಿಯ ಹೆಸರನ್ನು ಹೇಳಿಬಿಟ್ಟರೆ ಅದನ್ನೇ ಸತ್ಯ ಎಂದು ಹೇಳಿಬಿಡುವುದ ಕ್ಕಾಗುತ್ತದೆಯೆ?

ಶ್ರೀ ಸಿದ್ದರಾಮಯ್ಯ : ಆಯಿತು, ಆಯಿತು, ಜನಗಳ ಹತ್ತಿರ ಹೋಗಿ ನೀವು ಅದನ್ನೇ ಹೇಳಿ.

ಶ್ರೀ ಟಿ.ಬಿ. ಜಯಚಂದ್ರ : ಈ ಹೇಳಿಕೆಯನ್ನು ಕೊಟ್ಟಿರುವುದು ಒಬ್ಬ ಜವಾಬ್ದಾರಿಯುತ ಅಧಿಕಾರಿ. ಆ ಬಾಕ್ಸ್‌ಗಳಲ್ಲಿ ಎಷ್ಟು ಲೀಟರ್ ಇತ್ತೋ ಅದನ್ನೆಲ್ಲವನ್ನೂ ಲೆಕ್ಕ ಹಾಕಿಕೊಂಡರೆ ರೆಸಾರ್ಟ್‌ಗಳಲ್ಲಿ ಅವರೇನು ಮೀಟಿಂಗ್ ನಡೆಸುತ್ತಿದ್ದರೋ ಏನೋ ಎಂಬುದು ನಮಗೇನು ಅರ್ಥವಾಗುತ್ತಿಲ್ಲ.

ಶ್ರೀ ಡಿ.ಎನ್. ಜೀವರಾಜ್ : ಮಾನ್ಯ ಅಧ್ಯಕ್ಷರೆ, ಅಲ್ಲಿ 2 ಜಿ ಸ್ಪೆಕ್ಟ್ರಂನಲ್ಲಿಯೂ ಯಾರ ಯಾರ ಹೆಸರನ್ನು ಕೋರ್ಟಿನಲ್ಲಿ ಹೇಳಿದರು ಎಂಬುದರ ಮೇಲೆ ತೀರ್ಮಾನ ಮಾಡುವುದಕ್ಕಾಗುತ್ತದೆಯೆ? ಆದುದರಿಂದ ಹಿರಿಯರಾದ ಸಿದ್ದರಾಮಯ್ಯನವರು ಈ ರೀತಿ ಹೇಳುವುದು ಸರಿಯಲ್ಲ.

ಶ್ರೀ ಸಿದ್ದರಾಮಯ್ಯ: ಅಂದರೆ, ಇದರ ಬಗ್ಗೆ ಇನ್ನೂ ವಿಸ್ತಾರವಾಗಿ ಹೇಳಲಿ ಎಂದು ಜೀವರಾಜ್‌ರವರು ಹೇಳುತ್ತಿದ್ದಾರಷ್ಟೆ! ಇದನ್ನು ಬಹಳ ಮುಗುಂ ಆಗಿ ಹೇಳಿಬಿಟ್ಟಿದ್ದಾರೆ, ಇದನ್ನೂ ಇನ್ನೂ ವಿಸ್ತಾರವಾಗಿ ಹೇಳಲಿ ಎಂಬುದಿರಬಹುದು. ಜೀವರಾಜ್, ಇನ್ನೂ ವಿಸ್ತಾರವಾಗಿ ಹೇಳಬೇಕೆ? ಎಲ್ಲವನ್ನೂ ಡೀಟೈಲಾಗಿ ಹೇಳಲೆ?

ಶ್ರೀ ಡಿ.ಎನ್. ಜೀವರಾಜ್ : ಆ ರೀತಿ ಹೇಳುವುದು ಸರಿಯಲ್ಲವೆಂದೆ.

ಶ್ರೀ ಸಿದ್ದರಾಮಯ್ಯ : ಹಾಗಾದರೆ ನೀವು ಯಾರ ಕಡೆ? ಈ ಪೇಪರ್ ನಲ್ಲಿ ಹೇಳಿರುವಂಥವರು ನಿಮಗೆ ವಿರುದ್ಧವಾಗಿರುವವರು. ಮಾನ್ಯ ಅಧ್ಯಕ್ಷರೆ, ನಾನು ಇದನ್ನು ಬಹಳ ಲಘುವಾಗಿ ಮಾತನಾಡುತ್ತಿದ್ದೇನೆಂತಲ್ಲ ಅಥವಾ ಪೇಪರ್‌ನಲ್ಲಿ ಬಂದಿದೆಯಾದ ಕಾರಣ ಹೇಳುತ್ತಿದ್ದೇನೆಂತಲ್ಲ. ಇವತ್ತು ಆ ಅಧಿಕಾರಿ ಡಿ.ಸಿ.ಗೆ ಜಾಮೀನು ಸಿಕ್ಕಿದೆ. ಆ ಜಾಮೀನು ಅರ್ಜಿಯಲ್ಲಿ ಇದನ್ನು ಬರೆದಿದ್ದಾರೆ. ಜಾಮೀನು ಕೇಳಿದಾಗ, ಲೋಕಾಯುಕ್ತ ಪೊಲೀಸರು ಏಕೆ ಸೀಸ್ ಮಾಡಿದರು ಎಂದು ಕೇಳಿದಾಗ ಪಾಪ ಆ ಡಿ.ಸಿ. ಅಳುತ್ತಾ ಇವೆಲ್ಲವನ್ನೂ ಹೇಳಿಕೊಂಡಿದ್ದಾನೆ. ಗೋಲ್ಡನ್ ಪಾಮ್ ರೆಸಾರ್ಟ್‌ಗೆ ತೆಗೆದುಕೊಂಡು ಬನ್ನಿ ಎಂದು ಮಂತ್ರಿಗಳು ಹೇಳಿದ್ದರು, ಅದಕ್ಕೋಸ್ಕರ ನಾನು ಹೋಗಿ ಸಿ.ಎಲ್. 2 ಲೈಸೆನ್ಸ್ ಇರುವವರ ಹತ್ತಿರ ತೆಗೆದುಕೊಂಡು ಬಂದು ಗೋಲ್ಡನ್ ಪಾಮ್‌ಗೆ ಕೊಟ್ಟಿದ್ದೇನೆ ಎಂದು ಹೇಳಿದ್ದಾನೆ. ಇದಕ್ಕಿಂತ ನಾಚಿಕೆ ಗೇಡಿನ ಪ್ರಸಂಗ ಇನ್ನೊಂದು ಇದೆಯೆ ಸ್ವಾಮಿ? ಈಗ ಬರಗಾಲ ಬೇರೆ ಇದೆ. ಈ ಸರ್ಕಾರಕ್ಕೆ ಕಿಂಚಿತ್ ರೈತರ ಬಗ್ಗೆ, ಬಡವರ ಬಗ್ಗೆ ಕಾಳಜಿ ಇದೆಯೆ?

Is this the way the Minister should beave? ನಾಚಿಕೆ ಯಾಗುತ್ತದೆ. ಇದು ನಾನು ಹೇಳುವುದಲ್ಲ, Excise Minister ಅವರ ಕೈಕೆಳಗೆ ಕೆಲಸ ಮಾಡುತ್ತಿರುವಂತಹ ಒಬ್ಬ D.C. made a statement before the Court. ಅದು ಎಲ್ಲೋ statement ಮಾಡಿರುವುದಲ್ಲ. He made a statement before the court. ನಾಚಿಕೆಯಾಗಬೇಕಲ್ಲ? on this doubt only he should resign morality, ನೈತಿಕತೆ ಬಗ್ಗೆ ಸ್ವಲ್ಪವಾದರೂ ಕೂಡ ಗೌರವವಿದ್ದರೆ ಇಂಥದ್ದೆಲ್ಲ ಮಾಡುತ್ತಾರಾ? ಬರಗಾಲ ಇದೆ, ನಾವು ಬರಗಾಲವನ್ನು ನಿಭಾಯಿಸಿದ್ದೇ ವೆಂದು ಹೇಳುತ್ತಾರೆ. ಎಲ್ಲಿ ಮಾಡಿದ್ದೀರಿ? ಅಕ್ಟೋಬರ್–ನವೆಂಬರ್ ತಿಂಗಳಿನಲ್ಲಿ ಬರಗಾಲ ಎಂದು

ಘೋಷಣೆಯಾಯಿತು. Today we are in March. MLA ಗಳೆಲ್ಲಾ Task-Force Committee ಗಳಲ್ಲಿ ಶಿಫಾರಸ್ಸು ಮಾಡಿ ಬೋರ್‌ವೆಲ್ ತೋಡಿಸಬೇಕೆಂದರೆ ಒಂದು ರೂಪಾಯಿ ಕೂಡ ಕೊಟ್ಟಿಲ್ಲ. ನಾನು ಮೈಸೂರು D.C. ಗೆ ಫೋನ್ ಮಾಡಿ. ಹೊಸ ಬೋರ್‌ವೆಲ್‌ಗಳಿಗೆ ದುಡ್ಡಿದೆಯಾ ಎಂದು ಕೇಳಿದರೆ ನಮಗೇನು ಆ ರೀತಿಯ ಆದೇಶ ಬಂದಿಲ್ಲ ಸಾರ್ ಎಂದು ಹೇಳುತ್ತಾರೆ. ಮತ್ತೆ ನೀವು ಏಕೆ ಸರ್ಕಾರದಲ್ಲಿದ್ದೀರಿ? ಕುಡಿಯುವುದಕ್ಕೆ ನೀರು ಬೇಕು. There is a top most priority for any Government. ಇವತ್ತಿನವರೆಗೂ ನೀರು ಕೊಡುವುದಕ್ಕಾಗಿಲ್ಲ. Rural Development Minister ಏನು ಈ ವರ್ಷ 1,500 ಕೋಟಿ ರೂಪಾಯಿ plan ಮಾಡಿ ಕೊಂಡಿದ್ದಾರೆ, ಅದರಲ್ಲಿ 941 ಕೋಟಿ ರೂಪಾಯಿ ಬಿಡುಗಡೆ ಯಾಗಿದೆ, ಅದನ್ನು ಖರ್ಚು ಮಾಡಿಲ್ಲ. ಕುಡಿಯುವ ನೀರಿಗೆ ಸಂಬಂಧ ಪಟ್ಟಂತೆ ಅದರಲ್ಲಿ ಕೇಂದ್ರ ಸರ್ಕಾರದ ಮತ್ತು ರಾಜ್ಯ ಸರ್ಕಾರದ ಹಣ ಎಲ್ಲಾ ಸೇರಿಕೊಂಡಿದೆ ಎಂದು ಹೇಳುತ್ತಾರೆ. ಆ ದುಡ್ಡಿನಲ್ಲಿ ನೀರಿಗಾಗಿ ದುಡ್ಡು ಕೊಟ್ಟಿದ್ದೇವೆ, 202 ಕೋಟಿ ರೂಪಾಯಿಯ Action Plan ಮಾಡಿದ್ದೇವೆ. ಎಲ್ಲಾದರೂ ಒಂದೇ ಒಂದು ಹೊಸ ಬೋರ್‌ವೆಲ್ ತೋಡಿಸಿರುವುದು ಹೇಳಲಿ ನೋಡೋಣ. ನಾನು ಬೋರ್‌ವೆಲ್ ತೋಡುವವರಿಗೆ, ಅವರು ದುಡ್ಡು ಕೊಡದೆ ಹೋದರೆ ನಾನು ದುಡ್ಡು ಕೊಡುತ್ತೇನೆಂದು ಹೇಳಿ ಕೆಲವು ಬೋರ್‌ವೆಲ್ ಕೊರೆಸಿದ್ದೇನೆ. ಈ ಸರ್ಕಾರ ಎಷ್ಟು inefficient ಎನ್ನುವುದಕ್ಕೆ ಒಂದು ನಿದರ್ಶನ ಹೇಳುತ್ತೇನೆ. ಮಾನ್ಯ ಶ್ರೀನಿವಾಸ ಪ್ರಸಾದ್ ರವರೆ ಒಂದೇ ಕ್ಷೇತ್ರದಲ್ಲಿ 56 ಹಳ್ಳಿಗಳು ಬರುತ್ತವೆ. ದೊಡ್ಡಕೌಲಂದೆ ಏರಿಯಾದಲ್ಲಿ ಬಾರಿ ಬರಗಾಲ ಇದೆ. ಆ ಬರಗಾಲದಲ್ಲಿ ಅಲ್ಲಿರತಕ್ಕಂತ ಹಳ್ಳಿಗಳಿಗೆ ಮಾನ್ಯ ಮುಖ್ಯ ಮಂತ್ರಿಗಳನ್ನು ನಮ್ಮ ಜಿಲ್ಲೆಯ ಉಸ್ತುವಾರಿ ಮಂತ್ರಿಗಳು ಕರೆದುಕೊಂಡು ಹೋಗಿ ನಾಲ್ಕು ತಿಂಗಳ ಹಿಂದೆ ಉದ್ಘಾಟನೆ ಮಾಡಿಸಿದರು. Rural Development Minister ಅವತ್ತು ನಂಜನಗೂಡಿಗೆ ಬರಲಿಲ್ಲ. ನಾನು ಅಧಿಕಾರಿಗಳಿಗೆ ಇನ್ನೂ complete ಆಗಿಲ್ಲ, ಬೇಡವೆಂದು ಹೇಳಿದೆ. ನಾಲ್ಕು ತಿಂಗಳ ಹಿಂದೆ ಮಾನ್ಯ ಮುಖ್ಯಮಂತ್ರಿಗಳನ್ನು ಕರೆದುಕೊಂಡು ಬಂದು ಉದ್ಘಾಟನೆ ಮಾಡಿಸಿಬಿಟ್ಟರು. ಆಯಿತು, ನಮ್ಮ ಕ್ಷೇತ್ರಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಬರುತ್ತಾರೆ, ಬೇಡವೆನ್ನುವುದು ಏಕೆ ಎಂದು ಹೇಳಿ ನಾವು

ಹೋದೆವು. ಆದರೆ ಇವತ್ತಿನವರೆಗೂ ಹಳ್ಳಿಗಳಿಗೆ ನೀರು ಕೊಡುವುದಕ್ಕಾಗಿಲ್ಲ. ನಿಮ್ಮ ಕ್ಷೇತ್ರಗಳಲ್ಲಿ ಹಳ್ಳಿಗಳಿಗೆ ಹೋಗುತ್ತಿವೆಯೇನೋ ಗೊತ್ತಿಲ್ಲ. ನನ್ನ ಕ್ಷೇತ್ರ tail-end. ನಾಲ್ಕು ತಿಂಗಳಾಯಿತು, ಒಂದು ಹಳ್ಳಿಗಳಿಗೂ ಕೂಡ ನೀರು ಹೋಗಿಲ್ಲ. ನಾವು ಮೊನ್ನೆ KDP Meeting ಮಾಡುತ್ತಿದ್ದೆವು, ಜನರೆಲ್ಲಾ ಘೆರಾವೋ ಮಾಡುವುದಕ್ಕೆ ಬಂದರು. ಏಕೆ ಎಂದು ಕೇಳಿದರೆ, ಕುಡಿಯುವುದಕ್ಕೆ ನೀರಿಲ್ಲ ಸಾರ್ ಎಂದು ಹೇಳಿದರು. CEO ಗೆ ಹೋಗಿ ಹೇಳಿದರೆ ನಾವೇನು ಮಾಡೋಣ ಸಾರ್ pipes ಒಡೆದು ಹೋಗುತ್ತವೆ ಎಂದು ಹೇಳುತ್ತಾರೆ. Pipe ಒಡೆದು ಹೋಗುವುದಕ್ಕೆ ನಾನು ಕಾರಣವೇ? ಪೈಪ್ ಒಡೆದು ಹೋಗುವುದಕ್ಕೆ ಯಾರು ಕಾರಣ? ಕಳಪೆ ಕೆಲಸವಾಗಿರ ಬೇಕಲ್ಲ? ಅಲ್ಲಿ Contractor ಯಾರು? Engineer ಯಾರು? ಅವರ ಮೇಲೆ ಕ್ರಮ ಏನು ತೆಗೆದುಕೊಂಡಿದ್ದೀರಿ? ನೀವು ಇಲ್ಲಿ ಏಕೆ ಉದ್ಘಾಟನೆ ಮಾಡಿದಿರಿ? Who is answerable to them? Pipes ಎಲ್ಲಾ ಒಡೆದು ಹೋಗುತ್ತಿವೆ. Contractor ಯಾವನೋ ಹೈದರಾಬಾದಿನವನು. ಇಂಜಿನಿಯರುಗಳು, ಅವನು ನಮ್ಮ ಕೈಗೆ ಸಿಗುವುದಿಲ್ಲ ಸಾರ್ ಎಂದು ಹೇಳುತ್ತಾರೆ. ಅವರು ನಿಮ್ಮ ಕೈಗೆ ಸಿಗದಿದ್ದರೆ ನಿಮಗೆ ಏನು ಕೆಲಸ? Government ಏನು ಮಾಡುತ್ತಿದೆ? ಇಲ್ಲಿ ಯಾವನೋ sub-agent, sub-contractor ಅಂತೆ. ಪಾಪ ಆ Engineers, are expressing their inability. ಅವರು ಸಿಗುತ್ತಿಲ್ಲ, ನಾವು ಏನು ಮಾಡುವುದು ಸಾರ್ ಎಂದು ಹೇಳುತ್ತಾರೆ. ಇದೊಂದು ನಿದರ್ಶನ ನಿಮಗೆ ಹೇಳಿದ್ದು, how Government is running? How this Government is inefficient! ಯಾರೂ ಕೇಳುವವರಿಲ್ಲ, ಹೇಳುವವರಿಲ್ಲ. ಇವತ್ತು ಕುಡಿಯುವ ನೀರಿನ ಬಗ್ಗೆ ಎಲ್ಲಾ ಕಡೆ ಇದೇ ರೀತಿಯ ಪರಿಸ್ಥಿತಿಯಾಗಿದೆ. ಒಂದು ಕಡೆ ಕರೆಂಟ್ ಇಲ್ಲ. ಕುಡಿಯುವ ನೀರಿಗೆ piped-water and mini water supply ಗೆ ಕರೆಂಟ್ ಬೇಕೇ ಬೇಕು. ಆಮೇಲೆ ನೀವು ಏನು ಮಾಡಿದ್ದೀರಿ ಎಂದರೆ augmentation ಅಷ್ಟೇ ಮಾಡುತ್ತಾರಂತೆ, ಬೋರ್‌ವೆಲ್ ತೋಡು ವುದಿಲ್ಲವಂತೆ. Augmentation ಮಾಡಿ ಉಪ್ಪು ಹಾಕಿಕೊಂಡು ನೆಕ್ಕುವುದಾ? ಬತ್ತಿ ಹೋಗಿರುವ ಕಡೆ ನೀರೇ ಇಲ್ಲ. ನೀರೇ ಇಲ್ಲದಿರುವ ಕಡೆ ಮಾಡಿ ಉಪ್ಪು ಹಾಕಿಕೊಂಡು ನೆಕ್ಕುವುದೇ? ಸರ್ಕಾರಕ್ಕೆ

ಜವಾಬ್ದಾರಿ ಇಲ್ಲದೇ ಹೋದರೆ, seriousness ಇಲ್ಲದೆ ಹೋದರೆ ಈ ಪರಿಸ್ಥಿತಿ ನಿರ್ಮಾಣ ವಾಗುತ್ತದೆ. ನಾವು ಎಷ್ಟು ಸಾರಿ ಹೇಳೋಣ. This is third time we are bringing it to the notice of the Government. ದುಡ್ಡಿಲ್ಲದೆ ಇರುವುದರಿಂದ ಎಲ್ಲಾ ಕಡೆ ಕುಡಿಯುವ ನೀರಿಗೆ ಹಾಹಾಕಾರ ಇದೆ. ಮಾನ್ಯ ಬೆಳಮಗಿಯವರು ಹೇಳಿದ್ದು ನಿಜ, ನಾವು ಹಳ್ಳಿಗಳಿಗೆ ಹೋಗುವುದ ಕ್ಕಾಗುವುದಿಲ್ಲ. ಅಲ್ಲಿಗೆ ಹೋದರೆ ಕುಡಿಯುವುದಕ್ಕೆ ನೀರಿಲ್ಲ, ಕರೆಂಟ್ ಇಲ್ಲ, ಟ್ರಾನ್ಸ್‌ಫಾರ್ಮರ್ ಇಲ್ಲವೆಂದು ಹೇಳುತ್ತಾರೆ. ನಾವು KEB ಯ Executive Engineer ಗೆ ಹೇಳಿದರೆ ಏನು ಮಾಡೋಣ ಸಾರ್ ಒಂದೊಂದು constituency ನಲ್ಲಿ 500–600 transformers ಕೆಟ್ಟುಹೋಗಿವೆ. ಸರ್ಕಾರ ಏನು ಮಾಡುತ್ತಿದೆ? ನಾವು ಏನು ಮಾಡಬೇಕು ಹೇಳಿ ನೋಡೋಣ. ಇವರಿಗೆ ಸಾಧ್ಯವಾದರೆ ಸರ್ಕಾರ ನಡೆಸಬೇಕು, ಇಲ್ಲದೆ ಹೋದರೆ ಮರ್ಯಾದೆಯಾಗಿ ರಾಜೀನಾಮೆ ಕೊಟ್ಟು ಹೋಗಬೇಕು. ಜನಗಳಿಗೆ ಕಿರುಕುಳವಾಗಬಾರದು. ತೊಂದರೆಯಾಗುತ್ತದೆ. This is the situation in the entire state. 24 ಜಿಲ್ಲೆಗಳಲ್ಲಿ, 170 ತಾಲ್ಲೂಕುಗಳಲ್ಲಿ 123 ತಾಲ್ಲೂಕುಗಳಲ್ಲಿ ಮತ್ತು ಇನ್ನು ಕೆಲವು ಹೋಬಳಿ ಮಟ್ಟದಲ್ಲಿ ಬರಗಾಲ ಇದೆ. ಅವುಗಳನ್ನೆಲ್ಲಾ ಸೇರಿಸಿಕೊಂಡು ಬರಗಾಲ ಎಂದು declare ಮಾಡಿಲ್ಲ. ಹೋಬಳಿಗಳಲ್ಲಿ ಬರಗಾಲವಾಗಿದೆ. ಇಡೀ ಕರ್ನಾಟಕದಲ್ಲಿ ಬರಗಾಲವಾಗಿದೆ. ನೀವು ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದೀರಿ? 172 ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದೀರಿ. ಅದರಲ್ಲಿ 131 ಕೋಟಿ ರೂಪಾಯಿಯೇ ಬಿಡುಗಡೆ ಯಾಗಿರುವುದು. ಇನ್ನು 41 ಕೋಟಿ ರೂಪಾಯಿ ದಾರಿಯಲ್ಲಿದೆಯಂತೆ. ಅದು ಯಾವ ದಾರಿಯಲ್ಲಿದೆಯೋ ನನಗಂತೂ ಗೊತ್ತಿಲ್ಲ. ಈ ವರ್ಷಕ್ಕೆ CRF ಕೇಂದ್ರ ಸರ್ಕಾರದಿಂದ 126 ಕೋಟಿ ರೂಪಾಯಿ, ರಾಜ್ಯ ಸರ್ಕಾರದಿಂದ 42 ಕೋಟಿ ರೂಪಾಯಿ, matching grant 75:25 ಕೊಟ್ಟಿದ್ದು, 169 ಕೋಟಿ ರೂಪಾಯಿಯಲ್ಲಿ 172 ಕೋಟಿ ಬಿಡುಗಡೆ ಮಾಡಿದ್ದಾರೆ. ನೀವು ಏನು ಹಣವನ್ನು ಖರ್ಚು ಮಾಡಿದ್ದೀರಿ? ಈ ವರ್ಷ ಬಜೆಟ್ 85,000 ಕೋಟಿ ರೂಪಾಯಿ ಮಂಡಿಸಿದಿರಿ. ಮುಂದಿನ ವರ್ಷ 1,00,000 ಕೋಟಿ ರೂಪಾಯಿ ಮಂಡಿಸಿಬಿಟ್ಟಿದ್ದೀರಿ. ಅದೇನು ದೊಡ್ಡ achievement ಮಂಡಿಸುವುದು. 1,00,000 ಕೋಟಿ ರೂಪಾಯಿ ಮಂಡಿಸುವುದಕ್ಕೆ ಜಗಳ ಅಂಟಿಕೊಂಡು

ಬಿಟ್ಟಿತ್ತು. ಮಾನ್ಯ ಯಡಿಯೂರಪ್ಪನವರು ಒಂದು ಲಕ್ಷ ಕೋಟಿ ರೂಪಾಯಿ ಬಜೆಟ್ ಮಂಡಿಸಬೇಕು ಎಂದು ಇದ್ದರು, ಅದು ಅವರ ಕೈಯಲ್ಲಿ ಆಗದೇ ಹೋಯಿತು. ಇವರಿಗೆ ಹೇಗೋ chance ಸಿಕ್ಕಿಬಿಟ್ಟಿತು. ಅದು ಹೇಗೋ ಮಾನ್ಯ ಯಡಿಯೂರಪ್ಪನವರು ಹೊಗಳಿಬಿಟ್ಟಿದ್ದಾರೆ, ಹೊಗಳುವ ಹಾಗೆ ಇರಲಿಲ್ಲ, ಅಂತಹ ಹೊಗಳುವ ಬಜೆಟ್ ಏನಲ್ಲ. 1,03,000 ಕೋಟಿ ರೂಪಾಯಿ ಬಜೆಟ್‌ನಲ್ಲಿ 22,000 ಕೋಟಿ ರೂಪಾಯಿ ಸಲ. Is it a good budget? 22,000 ಕೋಟಿ ರೂಪಾಯಿ ಸಾಲ ಮಾಡಿರುವುದು, capital internal borrowing. ಕರ್ನಾಟಕದ ಮೇಲೆ ಈ ಮಾರ್ಚ್ ಅಂತ್ಯಕ್ಕೆ ಒಟ್ಟು ಸಾಲ ಆಗಿರುವಂಥಾದ್ದು, ಸುಮಾರು 1,10,000 ಕೋಟಿ ರೂಪಾಯಿ. ಒಂದು ಲಕ್ಷ ಕೋಟಿ ರೂ.ಗಳ ಬಜೆಟ್ ಅನ್ನು ಮಂಡನೆ ಮಾಡಿ ಬಿಟ್ಟಿದ್ದೇವೆ,. never in the history of Karnataka. ಇದು ಸ್ವಾಭಾವಿಕವಾಗಿ ಸಾಗುತ್ತಾ ಹೋಗುತ್ತಿರುವಂಥದ್ದು. Is it a good budget? No. ಇದನ್ನು ನಾನು ಬಜೆಟ್ ಮೇಲೆ ಮಾತನಾಡುವಾಗ ಹೇಳುತ್ತೇನೆ. ಈಗ ಅದನ್ನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ನಾನು ಏಕೆ ಹೇಳುತ್ತಿದ್ದೇನೆಂದರೆ, ಇಲ್ಲಿ ಬರಗಾಲಕ್ಕೆ ಕೊಡಲು ಹಣವಿಲ್ಲ. ಇವರು 172 ಕೋಟಿ ರೂ.ಗಳನ್ನು ಕೊಟ್ಟಿದ್ದೇವೆಂದು ಹೇಳುತ್ತಾರೆ. ಡಿ.ಸಿ.ಗಳ ಹತ್ತಿರ P.D. Account ನಲ್ಲಿ 167 ಕೋಟಿ ರೂ.ಗಳನ್ನು ಇಟ್ಟಿದ್ದೇವೆಂದು ಹೇಳುತ್ತಾರೆ. ಈ ಹಣ ಬಾಕಿ ಕೊಡುವಂಥದ್ದಕ್ಕೆ, ಬೇರೆ ಬೇರೆ ಇಲಾಖೆಗಳದ್ದು ಇವೆ, ಯಾವ್ಯಾವುದಕ್ಕೋ ಇರುತ್ತದೆ. ಇದು ಹಾಗೆ ಇದೆಯೇ? ಡಿ.ಸಿ.ಗಳಿಗೆ ಇದನ್ನು ಇದಕ್ಕೆ ಇಟ್ಟುಕೊಳ್ಳಿ ಎಂದು ಕೊಟ್ಟಿದ್ದಿರಾ? P.D. Account ಎಂದರೆ committed works ದು, bill ಕೊಡಬೇಕಾಗಿರುವಂಥದ್ದು ಇರುತ್ತವೆ, ಇನ್ಯಾವುದೋ ಕೆಲಸಗಳದ್ದು ಇರುತ್ತದೆ, ಇನ್ಯಾವುದೋ ಇಲಾಖೆಗಳದ್ದು ಇರುತ್ತವೆ. It is not entirely for the relief works. 167 ಕೋಟಿ ರೂ.ಗಳು ಪಿ.ಡಿ. ಅಕೌಂಟ್‌ನಲ್ಲಿದೆ, 172 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದ್ದೇವೆ. State Finance Commission ನಿಂದ 10 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿಬಿಟ್ಟಿದ್ದೇವೆ, town ಗಳಿಗೆಲ್ಲಾ ಬಿಡುಗಡೆ ಮಾಡಿ ಬಿಟ್ಟಿದ್ದೇವೆಂದು ಹೇಳುತ್ತೀರಿ. ಕುಡಿಯುವ ನೀರಿಗೆ, ಬೋರ್‌ವೆಲ್ ಕೊರೆಯಲು ಹಣವಿಲ್ಲ. ಇನ್ನೂ ಎರಡು ತಿಂಗಳಿಗೆ ಆಗುವಷ್ಟು ಮೇವು ಇದೆಯೆಂದು ಹೇಳುತ್ತಾರೆ. ಇದನ್ನು ಎಲ್ಲಿ ಇಟ್ಟಿದ್ದೀರಿ?

ನಾನು ಕಳೆದ ಬಾರಿಯೂ ಹೇಳಿದೆ. ಶಿರಾ ತಾಲ್ಲೂಕಿನಲ್ಲಿ ಇಡೀ ವರ್ಷದಲ್ಲಿ ಒಂದೇ ಬೆಳೆಯನ್ನು ಬೆಳೆಯುತ್ತಾರೆ. ಶೇಂಗಾ ಇಲ್ಲಿನ main crop, ಇಡೀ ಬೆಳೆ ನಾಶವಾಯಿತು. 90% of the crop ನಾಶವಾಗಿ ಹೋಯಿತು. ಇಲ್ಲಿ ಮೇವು ಎಲ್ಲಿದೆ? ಇಷ್ಟು ಎಕರೆಗೆ ಬಿತ್ತನೆ ಮಾಡಿದ್ದೇವೆ. ಇದರಲ್ಲಿ ಇಷ್ಟು ಇನ್ನೂ ಮೇವು ಬರಬಹುದೆಂದು ಇವರು ಸುಮ್ಮನೆ ಅಂದಾಜು ಹಾಕಿ ಇಟ್ಟುಕೊಂಡು ಬಿಟ್ಟಿದ್ದಾರೆ. There is no fodder at all. ಇನ್ನು 20 ದಿವಸಗಳಿಗೆ ಆಗುವಷ್ಟು ಮೇವು ಇಟ್ಟುಕೊಂಡಿದ್ದಾರೆಂದರೆ, ಇದು ಎಲ್ಲಿದೆ? 6 ಕೋಟಿ ರೂ.ಗಳನ್ನು ಮೇವು ಬೆಳೆಯುವುದಕ್ಕೆ ಕೊಟ್ಟಿದ್ದೇವೆ, ಬೀಜ ಹಂಚಿಕೆ ಮಾಡಿದ್ದೇವೆಂದು ಹೇಳಿದ್ದೀರಿ. ಇದನ್ನು ಎಲ್ಲಿ ಬೆಳೆದಿದ್ದೀರಿ? ಪಂಪ್‌ಸೆಟ್‌ಗಳು ಕೆಲಸ ಮಾಡುವುದಿಲ್ಲ. ಕೆರೆಗಳಲ್ಲಿ ನೀರಿಲ್ಲ, ಮೇವನ್ನು ಎಲ್ಲಿ ಬೆಳೆದಿದ್ದೀರೆಂಬುದನ್ನು ಹೇಳಿ. 123 ತಾಲ್ಲೂಕುಗಳಿಗೆ 34 ಗೋಶಾಲೆಗಳನ್ನು ಮಾಡಿದ್ದೇವೆಂದು ಹೇಳುತ್ತಾರೆ. 123 ತಾಲ್ಲೂಕುಗಳಲ್ಲೂ ಬರಗಾಲವಿದೆ, 34 ತಾಲ್ಲೂಕುಗಳಲ್ಲಿ ಗೋಶಾಲೆಗಳನ್ನು ಮಾಡಿದ್ದೀರಿ. ಇಡೀ 123 ತಾಲ್ಲೂಕುಗಳ ಎಲ್ಲಾ ಜಾನುವಾರುಗಳು ಈ 34 ಗೋಶಾಲೆಯಲ್ಲೇ ಇದೆಯೇ ಇವರ ಕೈಯಲ್ಲಿ ಕೇಂದ್ರ ಸರ್ಕಾರ ಕೊಟ್ಟಿರುವಂಥ ಹಣವನ್ನು ಖರ್ಚು ಮಾಡುವುದಕ್ಕೆ ಆಗುವುದಿಲ್ಲ. NREGS ನಲ್ಲಿ ಖರ್ಚು ಮಾಡುವುದಿಲ್ಲ, ಕೃಷಿ ವಿಕಾಸ ಯೋಜನೆಯಲ್ಲಿ ಖರ್ಚು ಮಾಡುವುದಿಲ್ಲ. Horticulture Mission ನಲ್ಲಿ ಹಣ ಖರ್ಚು ಮಾಡುವುದಿಲ್ಲ, ಕುಡಿಯುವ ನೀರಿಗೆ ಹಣವನ್ನು ಖರ್ಚು ಮಾಡುವುದಿಲ್ಲ, ಶೌಚಾಲಯಗಳಿಗೆ ಹಣ ಖರ್ಚು ಮಾಡುವುದಿಲ್ಲ. What is that, they are doing? ದಿನನಿತ್ಯ ಕುರ್ಚಿಗೋಸ್ಕರ ಜಗಳ. There is no Government at all. Virtually the Government is dead. No Government. ಸರ್ಕಾರ ಸತ್ತು ಹೋಗಿದೆ. ಇವತ್ತು ಯುದ್ಧೋಪಾದಿಯಲ್ಲಿ ಮಾಡಬೇಕಾಗಿರುವಂಥದ್ದು, ಇವನ್ನೆಲ್ಲಾ war-footing ನಲ್ಲಿ ಮಾಡಬೇಕು. ಇವತ್ತು ಎಲ್ಲಾ ಮಂತ್ರಿಗಳು ಇವರ ಎಲ್ಲಾ ಕೆಲಸಗಳನ್ನು ಬಿಟ್ಟು ಬರಗಾಲ ಪ್ರದೇಶಗಳಿಗೆ ಹೋಗಬೇಕು. ಇವರು ಯಾರಾದರೂ ಒಬ್ಬರು ಅಲ್ಲಿಗೆ ಹೋಗುತ್ತಾರ? ರೆಸಾರ್ಟ್‌ಗೆ ಹೋಗುತ್ತಾರೆ, ದೆಹಲಿಗೆ ಹೋಗುತ್ತಾರೆ. Revenue Minister ಅಧ್ಯಕ್ಷತೆಯಲ್ಲಿ ಅಥವಾ Agriculture Minister ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಬೇಕು. Cabinet Sub-

Committee ಆಗಬೇಕು. The Committee should visit all the districts to solve the problem then and there only. ಇವತ್ತಿನವರೆಗೆ ಒಂದು ಕಮಿಟಿ ಆಗಿದೆಯಾ? No, ಪ್ರತಿ ಜಿಲ್ಲೆಗೆ ಒಬ್ಬೊಬ್ಬರು ಅಧಿಕಾರಿಗಳನ್ನು ನೇಮಿಸಿದ್ದಾರೆ. ಇವರು ಯಾರಾದರೂ ಒಬ್ಬ ಅಧಿಕಾರಿ ಹೋಗಿ ಬರಗಾಲದ ಬಗ್ಗೆ review ಮಾಡಿದ್ದಾರಾ? ನೀವು ಮಾಡಿದ್ದೀರಾ?

ಶ್ರೀ ಬಿ.ಎನ್. ಬಚ್ಚೇಗೌಡ : District level ನಲ್ಲಿ ಮಾಡಿದ್ದೇವೆ.

ಶ್ರೀ ಸಿದ್ದರಾಮಯ್ಯ : ನಮ್ಮ ಜಿಲ್ಲೆಯಲ್ಲಿ ನಡೆದಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಎಲ್ಲಾ ಕಡೆಗಳಲ್ಲೂ ನಡೆಯುತ್ತಿದೆ.

ಶ್ರೀ ಸಿದ್ದರಾಮಯ್ಯ : ನಡೆಯುತ್ತಿದೆ ಎಂದು ಹೇಳುವುದಷ್ಟೆ...

ಶ್ರೀ ಜಗದೀಶ್ ಶೆಟ್ಟರ್ : ತಾವು ಒಂದು ನಿಮಿಷ.. ..

ಶ್ರೀ ಸಿದ್ದರಾಮಯ್ಯ : ಇಲ್ಲ, ನಾನು yield ಆಗುವುದಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, District level ನಲ್ಲಿ ಮಾಡುತ್ತಿದ್ದೇವೆ. ಇವರು ಬೋರ್‌ವೆಲ್‌ಗಳನ್ನು ಹಾಕಿಲ್ಲವೆಂದು ಹೇಳಿದರು. ಈ ವರ್ಷ 3,000 ಬೋರ್‌ವೆಲ್‌ಗಳನ್ನು ಕೊರೆದಿದ್ದೇವೆ, 90 ಕೋಟಿ ರೂ. ಗಳನ್ನು release ಮಾಡಿದ್ದೇವೆ,

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಆ ಎಲ್ಲಾ ಪಟ್ಟಿಯನ್ನು ನಮಗೆ ಕೊಡಿ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, CRF amount ಬಿಟ್ಟು, ನಮ್ಮ ಇಲಾಖೆಯಿಂದ 90 ಕೋಟಿ ರೂ.ಗಳನ್ನು additional amount release ಮಾಡಿದ್ದೇವೆ. ಎಲ್ಲಾ ಶಾಸಕರ ಅಧ್ಯಕ್ಷತೆಯಲ್ಲಿ Task-Force Committee ಗೆ ಹಣವನ್ನು ಬಿಡುಗಡೆ ಮಾಡಿದ್ದೇವೆ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ : ಅದು ಏತಕ್ಕೂ ಸಾಲುವುದಿಲ್ಲ, ಹಣ ಬಿಡುಗಡೆ ಮಾಡಿ ಸಾಕು.

ಶ್ರೀ ಸಿದ್ದರಾಮಯ್ಯ : ಎಲ್ಲೆಲ್ಲಿ ಕೊಟ್ಟಿದ್ದಾರೆ ಲಿಸ್ಟ್ ಕೊಡಿ.

(ಗೊಂದಲ)

ಶ್ರೀ ವಿ. ಮುನಿಯಪ್ಪ : ನಮ್ಮ constituency ಗೆ ಕೊಟ್ಟಿಲ್ಲ. ನೀವು ನಿಮ್ಮ ನಿಮ್ಮ constituency ಗಳಲ್ಲಿ ಮಾಡಿಕೊಂಡಿದ್ದೀರಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಮಾನ್ಯ ಜಗದೀಶ್ ಶೆಟ್ಟರ್ ರವರ ಬಗ್ಗೆ ನನಗೆ ಗೌರವವಿದೆ. ಅವರು list ಕೊಡಲಿ, ನಂತರ ಮಾತನಾಡಲಿ. ಅದನ್ನು ಕೊಟ್ಟಿದ್ದರೆ ನಾವೂ ಒಪ್ಪಿಕೊಳ್ಳುತ್ತೇವೆ. ನಮ್ಮ ಜಿಲ್ಲೆಯಲ್ಲಂತೂ ನನಗೆ ಗೊತ್ತಿರುವ ಮಟ್ಟಿಗೆ ಬರಗಾಲದ ನಿಮಿತ್ತವಾಗಿ ಒಂದೇ ಒಂದು ಬೋರ್‌ವೆಲ್ ಅನ್ನು ಕೊರೆಸಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಹಣ release ಮಾಡಿದ್ದೇವೆ, ಶಾಸಕರ ಅಧ್ಯಕ್ಷತೆಯಲ್ಲಿ Task-Force Committee ಇದೆ. ಇಲ್ಲಿ ಒಂದು ಪೈಸೆ ಬಂದಿಲ್ಲವೆಂದು ಹೇಳುತ್ತಾರೆ, 90 ಕೋಟಿ ರೂ.ಗಳನ್ನು ಕೊಟ್ಟಿದ್ದೇವೆ. 2,000 ಬೋರ್‌ಗಳನ್ನು ಕೊರೆಸಿದ್ದೇವೆ.

ಶ್ರೀ ಸಿದ್ದರಾಮಯ್ಯ : ನಮ್ಮ ಜಿಲ್ಲೆಯಲ್ಲಿ ಡಿ.ಸಿ.ಯವರು ಹೊಸ ಬೋರ್‌ವೆಲ್ ಕೊರೆಸುವುದಕ್ಕೆ ಒಂದು ರೂಪಾಯಿಯನ್ನು ಕೊಟ್ಟಿಲ್ಲ. I will prove it.

ಶ್ರೀ ಜಗದೀಶ್ ಶೆಟ್ಟರ್ : ಬೋರ್‌ವೆಲ್‌ಗಳನ್ನು ಕೊರೆಯಬೇಕಾಗಿದೆ, ಡ್ರಿಲ್ ಮಾಡಬೇಕಾಗಿದೆ ಎಂಬುದನ್ನು ಹೇಳಿ, ಅದು ಬಿಟ್ಟು ತಾವು ಏನೂ ಆಗಿಲ್ಲವೆಂದು ಹೇಳುವಂಥದ್ದು ಸರಿಯಲ್ಲ. ಈ ವರ್ಷ 2,000 ಬೋರ್‌ವೆಲ್‌ಗಳನ್ನು ಕೊರೆಸಿದ್ದೇವೆ. 3,500 ಬೋರ್‌ವೆಲ್‌ಗಳನ್ನು revolve ಮಾಡಿದ್ದೇವೆ.

ಶ್ರೀ ಸಿದ್ದರಾಮಯ್ಯ : ತಾವು ಮಧ್ಯೆ ನಿಂತು ಹೀಗೆ ಮಾತನಾಡಿದರೆ ಹೇಗೆ? ನಾನು information ತೆಗೆದುಕೊಂಡೇ ಮಾತನಾಡುತ್ತಿದ್ದೇನೆ. ನಾನು ನಮ್ಮ ಜಿಲ್ಲೆ information ಅಷ್ಟೇ ಅಲ್ಲ, ಬೇರೆ ಜಿಲ್ಲೆಗಳ information ಕೂಡ ತೆಗೆದುಕೊಂಡಿದ್ದೇನೆ.

ಡಾ: ಬಗಲಿ ಸಾರ್ವಭೌಮ ಸಾತಗೌಡ : ಮಾನ್ಯ ಅಧ್ಯಕ್ಷರೆ, ನನ್ನ ಮತಕ್ಷೇತ್ರದಲ್ಲಿ ಕೊರೆದ ಬಾವಿಗಳ ಬಗ್ಗೆ ಸರ್ಕಾರ release ಮಾಡಿರುವ ಮಾಹಿತಿಯನ್ನು ಕೊಡುತ್ತೇನೆ. ಈಗಾಗಲೇ ಇಂಡಿ ಮತಕ್ಷೇತ್ರಕ್ಕೆ 60 ಬೋರ್‌ವೆಲ್‌ಗಳನ್ನು ಕೊರೆಯಲಾಗಿದೆ. ಒಂದೂವರೆ ಕೋಟಿ ರೂ.ಗಳು ಬಿಡುಗಡೆಯಾಗಿದೆ. ಇದರ ಸಮಸ್ತ ಮಾಹಿತಿ ನನ್ನ ಬಳಿ ಇದೆ.

ಶ್ರೀ ಸಿದ್ದರಾಮಯ್ಯ : ಆಯಿತು, ನೀವು ಇಟ್ಟುಕೊಳ್ಳಿ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ : ತಮಗೆ ಮಾನ್ಯ ಮಂತ್ರಿಯವರು ವಿಶೇಷವಾಗಿ ಕೊಟ್ಟಿದ್ದಾರೆಂದು ಕಾಣುತ್ತದೆ.

ಶ್ರೀ ಬಂಡೆಪ್ಪ ಖಾಶೆಂಪೂರ್ : ಡಾಕ್ಟರ್‌ರವರಿಗೆ ವಿಶೇಷವಾಗಿ ಬಿಡುಗಡೆ ಮಾಡಿರಬೇಕು. ಇವರು ಏನು ಮಾತನಾಡುತ್ತಾರೊ ಏನೋ.. ..

(ಗೊಂದಲ)

ಶ್ರೀ ಹೆಚ್.ಕೆ. ಕುಮಾರಸ್ವಾಮಿ : ಆಯಿತು, ಯಾವ್ಯಾವ ಕ್ಷೇತ್ರಕ್ಕೆ ಕೊಟ್ಟಿದ್ದಾರೆಂಬ ಮಾಹಿತಿಯನ್ನು ಕೊಡಲಿ.

ಅಧ್ಯಕ್ಷರು : ಮಾನ್ಯ ಮಂತ್ರಿಯವರು ಮಾಹಿತಿಯನ್ನು ಕೊಡುತ್ತೇನೆಂದು ಹೇಳಿದ್ದಾರಲ್ಲಾ.. ..

ಶ್ರೀ ಹೆಚ್.ಕೆ. ಕುಮಾರಸ್ವಾಮಿ : ಕೊಡಲಿ.

ಶ್ರೀ ಸಿದ್ದರಾಮಯ್ಯ : ಡಾ: ಬಗಲಿ ಸಾರ್ವಭೌಮ ಸಾತಗೌಡರ ಕ್ಷೇತ್ರಕ್ಕೆ ಕೊಟ್ಟಿದ್ದಾರೋ, ಏನೋ ನನಗೆ ಗೊತ್ತಿಲ್ಲ. ನಾವು ಏನು ಸುಳ್ಳು ಹೇಳುತ್ತೇವೆಯೇ?

ಶ್ರೀ ಸಿದ್ದು ಸವದಿ : ನಮ್ಮ ಕ್ಷೇತ್ರದಲ್ಲೂ ಬೋರ್‌ವೆಲ್‌ಗಳನ್ನು ಕೊರೆದಿದ್ದಾರೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಮಾನ್ಯ ರೇವಣ್ಣನವರೆ, ಬೋರ್‌ವೆಲ್‌ಗಳಿಗೆ ಹಣವನ್ನು ಕೊಟ್ಟಿದ್ದಾರಾ?

ಶ್ರೀ ಹೆಚ್.ಡಿ. ರೇವಣ್ಣ : ಇಲ್ಲ.

ಶ್ರೀ ಸಿದ್ದರಾಮಯ್ಯ : ಅದನ್ನು ಹೇಳದೇ ಕುಳಿತಿದ್ದೀರಿ, ಇಲ್ಲವೆಂದು ಹೇಳಿ. ಮಾನ್ಯ ಅಧ್ಯಕ್ಷರೆ, ತಮಗೆ ಮಾಹಿತಿ ಇದೆಯೋ, ಇಲ್ಲವೋ, ಗೊತ್ತಿಲ್ಲ ಅಥವಾ ಅಧಿಕಾರಿಗಳು ನಿಮಗೆ ಸುಳ್ಳು ಮಾಹಿತಿಯನ್ನು ಕೊಟ್ಟಿರಬೇಕು, ನೀವು ಯಾರು ಆ ಜಿಲ್ಲೆಗಳಿಗೆ, ಹಳ್ಳಿಗಳಿಗೆ ಹೋಗಿಲ್ಲವೆಂದ ಮೇಲೆ ನಿಮಗೆ ಹೇಗೆ ಗೊತ್ತಾಗುತ್ತದೆ.

ಶ್ರೀ ಬಿ.ಎನ್. ಬಚ್ಚೇಗೌಡ : ನಾವು ಹೋಗಿದ್ದೇವೆ.

ಶ್ರೀ ಸಿದ್ದರಾಮಯ್ಯ : ನೀವು ಹೋಗಿರಬಹುದು, ನನಗೆ ಗೊತ್ತಿಲ್ಲ. ನಾನು ನಿಮ್ಮ ಜಿಲ್ಲೆಯಲ್ಲಿ ಕೇಳುತ್ತೇನೆ.

ಶ್ರೀ ಬಿ.ಎನ್. ಬಚ್ಚೇಗೌಡ : ನಮ್ಮ ಜಿಲ್ಲೆಗಳಲ್ಲಿ Task-Force meeting ಮಾಡಿದ್ದೇವೆ, ಎಲ್ಲವನ್ನು ಕೊಟ್ಟಿದ್ದೇವೆ.

ಶ್ರೀ ಸಿದ್ದರಾಮಯ್ಯ : ನಾನು ಮೈಸೂರಿನ ಬಗ್ಗೆ ಖಚಿತವಾಗಿ ಹೇಳುತ್ತೇನೆ. ನಿಮಗೆ ಬಾಗಲಕೋಟೆ in-charge ಕೊಟ್ಟಿದ್ದಾರೆ. ಇದಕ್ಕೆ

ಸಂಬಂಧಪಟ್ಟಂತೆ ಮಾನ್ಯ ಎ.ಎಸ್.ಪಾಟೀಲ್, ಇಲ್ಲಿ ನಮ್ಮವರು ಯಾರು ಇಲ್ಲ, ಅದಕ್ಕೆ ನೀವು ಹೀಗೆ ಹೇಳುತ್ತಿದ್ದೀರಿ. ನಮ್ಮವರು ಇಲ್ಲಿ ಯಾರು ಇಲ್ಲವಲ್ಲಾ, ಅದಕ್ಕೆ ಹೀಗೆ ಹೇಳಿದರೆ ನಡೆಯುತ್ತದೆಂದು ಹೇಳುತ್ತಿದ್ದೀರಿ, ನನಗೆ ಗೊತ್ತಾಯಿತು. ಅಲ್ಲಿ ನಾನು ಕೇಳಿಕೊಂಡು ಬಂದಿದ್ದೇನೆ, ನಾನೇ ಸ್ವತಃ ಮೈಸೂರು ಡಿ.ಸಿ. ಯವರಿಗೆ ಹೊಸ ಬೋರ್‌ವೆಲ್‌ಗಳನ್ನು ತೊಡುವುದಕ್ಕೆ ಹಣವಿದೆಯಾ ಎಂದು ಫೋನ್ ಮಾಡಿದ್ದೆ, ಇಲ್ಲ ಸಾರ್, ಹೊಸ ಬೋರ್ ವೆಲ್‌ಗಳನ್ನು ತೊಡುವುದಕ್ಕೆ ನಮಗೆ ಯಾವುದೇ ಆದೇಶ ಬಂದಿಲ್ಲವೆಂದು ಹೇಳಿದರು. ಬೋರ್‌ವೆಲ್ ತೋಡುವವರಿಗೆ, ರಿಗ್ ಓನರ್‌ಗಳಿಗೆ, ನಮ್ಮಲ್ಲಿ ಒಂದಷ್ಟು ಬೋರ್‌ವೆಲ್‌ಗಳನ್ನು ಹೊಡೆದಿರು, ನಾನು ಸರ್ಕಾರದಲ್ಲಿ ಮಾತನಾಡುತ್ತೇನೆ, ಹಣ ಕೊಡಿಸುತ್ತೇನೆ ಎಂದು ಹೇಳಿ ನಾನು ಒಂದಷ್ಟು ಬೋರ್‌ವೆಲ್‌ಗಳನ್ನು ಮಾಡಿಸಿಬಿಟ್ಟಿದ್ದೇನೆ. ಒಂದು ವೇಳೆ ಸರ್ಕಾರ ಕೊಡದೇ ಹೋದರೆ ನನ್ನ ಕೈನಿಂದ ದುಡ್ಡು ಕೊಡಬೇಕು. ನಮಗೆ 33 ಲಕ್ಷ ರೂಪಾಯಿ ಬಂದಿದೆ. ಅದನ್ನು ಇನ್ನೂ ಖರ್ಚು ಮಾಡಿಲ್ಲ. ಅದರಲ್ಲಿ ಈ ಬೋರ್‌ವೆಲ್ ಗಳಿಗೆ ಕೊಡಬೇಕು. ಇದಲ್ಲದೇ, ಇವರ ಹತ್ತಿರ ತಾರತಮ್ಯ ಮನೋಭಾವವೂ ಇದೆ. ಅವರಿಷ್ಟ ಬಂದ ಕ್ಷೇತ್ರಗಳಿಗೆ ದುಡ್ಡು ಕೊಡುತ್ತಾರೆ. ನಾನು Supplementary Estimates ನಲ್ಲಿ ನೋಡಿದೆ. ದೇವಸ್ಥಾನಗಳಿಗೆ 37 ಕೋಟಿ ರೂಪಾಯಿ ಎಂದು ಇದೆ, ಯಾವಯಾವ ದೇವಸ್ಥಾನಗಳಿಗೆ ಕೊಟ್ಟಿದ್ದೀರಿ ಎನ್ನುವುದನ್ನು ಹೇಳಬೇಕಾಗುತ್ತದೆ. ನಾವು ಇದಕ್ಕೆ ಸುಮ್ಮನೆ ಒಪ್ಪಿಗೆ ಕೊಟ್ಟುಬಿಡಬೇಕೆ? ದೇವಸ್ಥಾನಗಳಿಗೆ ಕೊಟ್ಟಿರುವ ದುಡ್ಡು Supplementary Estimates ನಲ್ಲಿ ಬರುತ್ತದೆ. ಇಂಥಾದ್ದನ್ನು ನಾನು ಯಾವತ್ತೂ ನೋಡಿರಲಿಲ್ಲ. ದೇವಸ್ಥಾನಗಳಿಗೆ ದುಡ್ಡು ಕೊಡುವುದು ಇವರಿಗೆ ಬಹಳ emergent expenditure, committed expenditure. ಒಂದು ಕಡೆ ಬರಗಾಲವಿದೆ, ಇನ್ನೊಂದು ಕಡೆ ನೀವು ಈ ರೀತಿ ಸ್ವೇಚ್ಛೆಯಾಗಿ, ಮನಸೋ ಇಚ್ಛೆಯಾಗಿ ಖರ್ಚು ಮಾಡುತ್ತೀರಿ. ಯಾವುದಕ್ಕೆ ಖರ್ಚು ಮಾಡಬೇಕೋ ಅದಕ್ಕೆ ದುಡ್ಡಿಲ್ಲ. ಕುಡಿಯುವ ನೀರಿಗೆ ದುಡ್ಡಿಲ್ಲ. ರಸ್ತೆಗಳನ್ನು ದುರಸ್ತಿ ಮಾಡುವುದಕ್ಕೆ ದುಡ್ಡಿಲ್ಲ. ಗುಂಡಿಗಳನ್ನು ಮುಚ್ಚುವುದಕ್ಕೆ ನಿಮ್ಮ ಹತ್ತಿರ ದುಡ್ಡಿಲ್ಲ. ಮೇವು ತೆಗೆದುಕೊಂಡು ಬರಲು ದುಡ್ಡಿಲ್ಲ. ಜನಗಳಿಗೆ ಕೆಲಸ ಕೊಡಲು ದುಡ್ಡಿಲ್ಲ. ಅಧಿಕಾರಿಗಳಾಗಲೀ, District in-Charge Minister ಗಳಾಗಲೀ ಎಲ್ಲಿಗೂ ಹೋಗುತ್ತಿಲ್ಲ. ಈ ವರ್ಷ ಬರಗಾಲವಿದೆ, ರೈತರ ಸಾಲ ಮನ್ನಾ

ಮಾಡಿ ಎಂದು ಹೇಳಿದೆವು. ಬಜೆಟ್‌ನಲ್ಲಿ ಅದನ್ನು ಮಾಡಬಹುದೇನೋ ಎನ್ನುವ ಲೆಕ್ಕಾಚಾರ ನಮ್ಮದಿತ್ತು. ನಿಮಗೆ ಅದನ್ನೂ ಕೂಡ ಮಾಡುವುದಕ್ಕೆ ಆಗಲಿಲ್ಲ. ದಾನ, ಧರ್ಮ ಮಾಡುವುದಕ್ಕೆ ನಿಮ್ಮ ಹತ್ತಿರ ದುಡ್ಡು ಇರುತ್ತದೆ. ರೈತರಿಗೆ ಕೊಡುವುದಕ್ಕೆ ದುಡ್ಡು ಇರುವುದಿಲ್ಲ. ಈ ದೇಶದಲ್ಲಿ ಎಲ್ಲಾದರೂ ಉಂಟೇ? ಬರಗಾಲವಿರುವಾಗ Golden palm Resort ಗೆ D.C. ಕೈಯಲ್ಲಿ Whisky ತರಿಸಿಕೊಂಡರೆ ಹೇಗೆ ತೋಟಗಾರಿಕಾ ಮಂತ್ರಿಗಳೇ? ತೋಟಗಾರಿಕಾ ಇಲಾಖೆಗೆ 300 ಕೋಟಿ ರೂಪಾಯಿ ನಷ್ಟವಾಗಿದೆ ಎಂದು ಇದೆಯಲ್ಲವೇ? ರೈತರಿಗೆ 300 ಕೋಟಿ ರೂಪಾಯಿ ನಷ್ಟವಾಗಿದೆ ಎಂದು ಅಂದಾಜು ಮಾಡಿದ್ದೀರಿ. ರೈತರಿಗೆ ಆ ನಷ್ಟವನ್ನು ತುಂಬಿಕೊಡಿ ಎಂದು ನಿಮಗೆ ಒಂದು ರೂಪಾಯಿಯನ್ನಾದರೂ ಕೊಟ್ಟಿದ್ದಾರೆಯೇ ಕೊಟ್ಟಿಲ್ಲ.

ಶ್ರೀ ಎಸ್.ಎ. ರವೀಂದ್ರನಾಥ್ : ಮಳೆ ಚೆನ್ನಾಗಿ ಬಂದಿದ್ದರೆ 300 ಕೋಟಿ ರೂಪಾಯಿಗಳಷ್ಟು ಉತ್ಪನ್ನ ಜಾಸ್ತಿಯಾಗಬೇಕಾಗಿತ್ತು ಎಂದು ಹೇಳಿದ್ದೇವೆ.

ಶ್ರೀ ಸಿದ್ದರಾಮಯ್ಯ : ಈ ರೀತಿ ಹೊಸ ಹೊಸದನ್ನು ನೀವು ಎಲ್ಲಿಂದ ತರುತ್ತೀರಿ? 300 ಕೋಟಿ ರೂಪಾಯಿಗಳಷ್ಟು ಉತ್ಪನ್ನ ಹೆಚ್ಚಾಗಬೇಕಿತ್ತಂತೆ, ಅದು ನಷ್ಟವಾಗಿದೆಯಂತೆ. ಹಾಗಾದರೆ ಇದು ಏನು? . ತೋಟಗಾರಿಕಾ ಬೆಳೆಯಲ್ಲಿ ಸುಮಾರು 70 ಲಕ್ಷ ಹೆಕ್ಟೇರ್‌ನಲ್ಲಿ ಬೆಳೆಯಾಗಲಿಲ್ಲ ಎಂದು ಇದೆಯಲ್ಲ, ಇದೇನು? ಮಳೆ ಇಲ್ಲದೇ ಬೆಳೆಯಾಗಲಿಲ್ಲ ಎಂದು ಇದೆ. ಅದು ಕೃಷಿಗೆ ಸಂಬಂಧಿಸಿದ್ದೇ? ನಿಮ್ಮದೇನೂ ನಷ್ಟವಾಗಿಲ್ಲವೇ? ನಿಮ್ಮದೆಲ್ಲವೂ ಚೆನ್ನಾಗಿದೆಯೇ? ಹಾಗಾದರೆ, ಹೋದ ವರ್ಷಕ್ಕಿಂತ ಈ ವರ್ಷ ತೋಟಗಾರಿಕಾ ಉತ್ಪನ್ನ ಎಷ್ಟು ಟನ್ ಜಾಸ್ತಿಯಾಗಿದೆ ಎಂದು ಹೇಳಿ?

ಶ್ರೀ ಎಸ್.ಎ. ರವೀಂದ್ರನಾಥ್ (ತೋಟಗಾರಿಕೆ ಸಚಿವರು) : ಈ ವರ್ಷ ಎಷ್ಟು ಉತ್ಪನ್ನ ಬರಬೇಕಾಗಿತ್ತೋ ಅಷ್ಟು ಬಂದಿದೆ.

ಶ್ರೀ ಸಿದ್ದರಾಮಯ್ಯ : ಇದು ಸರ್ಕಾರ ಹೇಳುವ ಉತ್ತರವೇ? Is it the statement of the Government?

ಶ್ರೀ ಎಸ್.ಎ. ರವೀಂದ್ರನಾಥ್ : ಕೃಷಿಯಲ್ಲಿ ಕಡಿಮೆಯಾಗಿದೆ. ತೋಟಗಾರಿಕೆಯಲ್ಲಿ ಯಾವುದೂ ಬೆಳೆ ಕಡಿಮೆಯಾಗಿಲ್ಲ.

ಶ್ರೀ ಸಿದ್ದರಾಮಯ್ಯ : ಸರ್ಕಾರ ಉತ್ತರ ಕೊಟ್ಟಿದೆ, ಅದನ್ನು ಓದಲೇ?

ಶ್ರೀ ಬಿ.ಎನ್. ಬಚ್ಚೇಗೌಡ : 3% ಕಡಿಮೆಯಾಗಿದೆ.

ಶ್ರೀ ಸಿದ್ದರಾಮಯ್ಯ : ಅವರು ಇಲ್ಲ ಎಂದು ಹೇಳುತ್ತಿದ್ದರಲ್ಲ ಬಚ್ಚೇಗೌಡರೆ?

ಶ್ರೀ ಬಿ.ಎನ್. ಬಚ್ಚೇಗೌಡ : ಅಗ್ರಿಕಲ್ಚರ್‌ನಲ್ಲಿ ಒಟ್ಟು 3% ಕಡಿಮೆ ಯಾಗಿದೆ. ಅದರಲ್ಲಿ ಹಾರ್ಟಿಕಲ್ಚರ್ ಸಹಾ ಬರುತ್ತದೆ. ಒಟ್ಟು ಉತ್ಪನ್ನದಲ್ಲಿ 3% ಈ ಸಲ ಕಡಿಮೆಯಾಗಿದೆ. Growth of Agriculture ನಲ್ಲಿ ಒಟ್ಟು ಅಂದಾಜು ಇದ್ದದ್ದು 140 ಲಕ್ಷ ಟನ್, ಅದರಲ್ಲಿ 124 ಲಕ್ಷ ಟನ್ ಬೆಳೆದಿದ್ದೇವೆ. National Agriculture ತೆಗೆದುಕೊಂಡರೆ National percentage 13% ಬರುತ್ತದೆ. 39% Industry ಯಲ್ಲಿ ಬರುತ್ತದೆ.

ಶ್ರೀ ಸಿದ್ದರಾಮಯ್ಯ : "ಪ್ರಸಕ್ತ ಸಾಲಿನಲ್ಲಿ ಒಟ್ಟು 20.37 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ತೋಟಗಾರಿಕಾ ಬೆಳೆಗಳು ಬಿತ್ತನೆಯಾಗಿದ್ದು 69,704 ಹೆಕ್ಟೇರ್ ಪ್ರದೇಶದ ಬೆಳೆ ಮಳೆಯ ಕೊರತೆಯಿಂದ ಒಣಗಿದ್ದು, ಅಂದಾಜು ಬೆಳೆ ಹಾನಿಯ ಮೊತ್ತ 299 ಕೋಟಿ ರೂಪಾಯಿಗಳು." ಇದು ನಿಮ್ಮ ಸರ್ಕಾರವೇ ಕೊಟ್ಟಿರುವುದು. It is not my statement. It is a statement, it is a reply given by the Government. Will you deny it or accept it? ಇದು ಸರ್ಕಾರ ಕೊಟ್ಟಿರುವ ಉತ್ತರ. ಸುಮ್ಮನೆ ಏನೋ ಹೇಳುವುದಕ್ಕೆ ಹೋಗಬೇಡಿ. ಕೃಷಿಯಲ್ಲಿ ಆಹಾರ ಉತ್ಪನ್ನ ಎಷ್ಟು ಕಡಿಮೆಯಾಗಿದೆ ಎಂದರೆ out of 104 ಲಕ್ಷ ಹೆಕ್ಟೇರ್‌ನಲ್ಲಿ 34.68 ಲಕ್ಷ ಹೆಕ್ಟೇರ್‌ನಲ್ಲಿ ಬೆಳೆ ಒಣಗಿ ಹೋಗಿದೆ. ಇದು ನೀವೇ ಕೊಟ್ಟಿರುವ ಉತ್ತರ. ಸುಮಾರು 17 ಲಕ್ಷ ಹೆಕ್ಟೇರ್ ನಲ್ಲಿ ಬಿತ್ತನೆಯೇ ಆಗಲಿಲ್ಲ. So totally it comes to about 51 lakh hectrares out of 104 lakh Hectares. ಹೀಗಿರುವಾಗ 124 ಲಕ್ಷ ಟನ್ ಬಂತು ಎಂದು ನೀವು ಹೇಗೆ ಹೇಳಿದಿರಿ? ಅದು ಎಲ್ಲಿದೆ? It is estimated in Economic Survey. It is not a correct figure. ಅದು ಒಂದು ಅಂದಾಜು ಅಷ್ಟೇ. ಎಕನಾಮಿಕ್ ಸರ್ವೆಯಲ್ಲಿ ಅಂದಾಜು ಮಾಡಿ ಹೇಳಿದ್ದಾರೆ. ಇನ್ನೂ ಮಾರ್ಚ್ ಮುಗಿದಿಲ್ಲ. Economic Survey print ಆದಾಗ ಇದ್ದಂಥಾದ್ದನ್ನು ಹೇಳಿದ್ದಾರೆ. ಅದನ್ನು ನೋಡಿಕೊಂಡು ನೀವು 124 ಲಕ್ಷ ಟನ್ ಬಂದಿದೆ ಎಂದು ಹೇಳುತ್ತಿದ್ದೀರಿ. How can it be? 104 ಲಕ್ಷ ಹೆಕ್ಟೇರ್‌ನಲ್ಲಿ 51 ಲಕ್ಷ ಹೆಕ್ಟೇರ್‌ನಲ್ಲಿ ಬೆಳೆ ಹೋದಮೇಲೆ ಅಷ್ಟು ಹೇಗೆ ಬರುತ್ತದೆ? ನೀವು ಗುರಿ ಇಟ್ಟುಕೊಂಡಿದ್ದೇ 130 ಲಕ್ಷ ಟನ್. ಹೀಗಿರುವಾಗ

ನಿಮಗೆ 124 ಲಕ್ಷ ಟನ್ ಹೇಗೆ ಬರುತ್ತದೆ? How could it be? Just not possible. ನೀವು ಹೇಳಿರುವುದನ್ನೇ ಈಗ ನಾನು ಹೇಳುತ್ತಿದ್ದೇನೆ. ನಾನೇನು ಇದನ್ನು ಹುಟ್ಟಿಸಿಕೊಂಡು ಹೇಳುತ್ತಿಲ್ಲ. ನಾನು Economic Survey ಯನ್ನು ಓದಿಕೊಂಡು, ನಿಮ್ಮ ಉತ್ತರವನ್ನು ಓದಿಕೊಂಡು ಹೇಳುತ್ತಿದ್ದೇನೆ. Economic Survey ಯಲ್ಲಿ ನೀವೇ ಹೇಳಿರುವುದು ಇದು. The Government has totally failed. ಇದು ನಿಷ್ಕ್ರೀಯ ಸರ್ಕಾರ, ಸತ್ತು ಹೋದ ಸರ್ಕಾರ. ಇವರಿಗೆ ಕುಡಿಯುವ ನೀರಿನ ಬಗ್ಗೆ ಗಮನವಿಲ್ಲ, ಮೇವಿಲ್ಲ, ಜನಗಳಿಗೆ ಕೆಲಸವಿಲ್ಲ. ರಾಜ್ಯದಲ್ಲಿ 123 ತಾಲ್ಲೂಕುಗಳನ್ನು ಬರಪೀಡಿತ ಪ್ರದೇಶಗಳೆಂದು ಘೋಷಣೆ ಮಾಡಿದ್ದೀರಿ. 123 ತಾಲ್ಲೂಕುಗಳಿಗೆ 34 ಗೋಶಾಲೆಗಳನ್ನು ತೆರೆದಿದ್ದೀರಿ? 123 ತಾಲ್ಲೂಕುಗಳಿಗೆ 34 ಗೋಶಾಲೆಗಳು ಸಾಕೇ? ಬೇಕಾಗಿರುವುದು ಅಷ್ಟೇನಾ? ಯಾವ ಆಧಾರದಲ್ಲಿ 34 ಗೋಶಾಲೆಗಳು ಸಾಕು ಎಂದು ಹೇಳಿದ್ದೀರಿ? ಬೇಸಿಗೆ ಇನ್ನೂ ಎರಡು ತಿಂಗಳು ಇದೆ. ಬರಗಾಲ ಇನ್ನೂ ತೀವ್ರವಾಗುತ್ತದೆ. ಮೇ–ಜೂನ್ ತಿಂಗಳವರೆಗೆ ಇದು ತೀವ್ರವಾಗುತ್ತದೆ. ವಿದ್ಯುತ್ತಿನ ಸಮಸ್ಯೆ ಬರುತ್ತದೆ, ಕುಡಿಯುವ ನೀರಿನ ಸಮಸ್ಯೆ ಬರುತ್ತದೆ, ಜನ ಗುಳೆ ಹೋಗುವುದು ಜಾಸ್ತಿಯಾಗುತ್ತದೆ. ಅಭಿವೃದ್ಧಿಯೇ ನಮ್ಮ ಮಂತ್ರ ಎಂದು ಇವರು ಎಷ್ಟೆಲ್ಲಾ ಹೇಳುತ್ತಾರೆ. ಇಂಥ ನಮ್ಮ ರಾಜ್ಯದಲ್ಲಿ ರೈತರು ಆತ್ಮಹತ್ಯೆ ಮಾಡಿಕೊಳ್ಳುವುದರಲ್ಲಿ Karnataka is in No.2 in the country. It is next to Andhra Pradesh. ಇದು ನಾನು ಹೇಳುತ್ತಿರುವುದಲ್ಲ. The State Crime Records Bureau ಹೇಳುತ್ತಿರುವುದು. ಅದರ ಪ್ರಕಾರ ಕಳೆದ 3 ವರ್ಷಗಳಲ್ಲಿ 6 ಸಾವಿರ ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈ ಕಾರಣದಿಂದ Everyday 5 to 6 people ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಇದು ಬಹಳ ನೋವಿನ ಸಂಗತಿ. ಕಣ್ಣಲ್ಲಿ ನೀರು ಬರುತ್ತದೆ. ಅದಕ್ಕೆ ಪಾಪ ಬೆಳಮಗಿಯವರು ಸತ್ಯ ಹೇಳಿ ಗುಲ್ಬರ್ಗಾಕ್ಕೆ ಹೋಗಿ ಕ್ಷಮೆ ಕೇಳಿದ್ದಾರೆ. Permanent ಆಗಿ MLA ಗಳನ್ನು Resort ನಲ್ಲಿಯೇ ಇಡಿ, ಗೋಳು ತಪ್ಪಿ ಹೋಗುತ್ತದೆ. ಸರ್ಕಾರ ಈಗಲಾದರೂ ಯೋಚಿಸಬೇಕು. ಇಲ್ಲದೇ ಹೋದರೆ ಜನ ಇವರಿಗೆ ತಕ್ಕ ಪಾಠ ಕಲಿಸುತ್ತಾರೆ. ಈಗ ಜನ ಬಹಳ ಬುದ್ಧಿವಂತರಿದ್ದಾರೆ. ಅಧಿಕಾರದಲ್ಲಿರುವಾಗ ಜನರು ಸುಮ್ಮನಿರುತ್ತಾರೆ. ಅವರ ಮನಸ್ಸಿನಲ್ಲಿ ಏನಿದೆ ಎನ್ನುವುದು ಚುನಾವಣೆಯಲ್ಲಿ ಗೊತ್ತಾಗುತ್ತದೆ. ಯಾರೂ ತಪ್ಪು

ತಿಳಿದುಕೊಳ್ಳಬೇಡಿ. ಶೆಟ್ಟಿ ಬಂಡವಾಳ ಸತ್ತಮೇಲೆ ಗೊತ್ತಾಯಿತು ಎನ್ನುವ ಗಾದೆ ನಮ್ಮ ಕಡೆ ಇದೆ. ಈ ಶೆಟ್ಟರ್ ಅಲ್ಲ, ಶೆಟ್ಟರು ಎಂದರೆ ವ್ಯಾಪಾರಸ್ಥರು. ಈ ಸರ್ಕಾರ ಸಂಪೂರ್ಣವಾಗಿ ಬರಗಾಲ ಎದುರಿಸುವಲ್ಲಿ ವಿಫಲವಾಗಿದೆ. ಕೇಂದ್ರ ಸರ್ಕಾರಕ್ಕೆ 2600 ಕೋಟಿ ರೂ.ಗಳು ಬೇಕೆಂದು memorandum ಕೊಟ್ಟರು. ಅಲ್ಲಿಯ ಅಧಿಕಾರಿಗಳು ಇಲ್ಲಿಗೆ ಬಂದು ನೋಡಿಹೋದರು. ಆದರೆ, ಏನಾದರೂ pursue ಮಾಡಿದ್ದಾರೆಯೇ? Memorandum ಕೊಟ್ಟಮೇಲೆ ಆಕಡೆಗೆ ತಿರುಗಿಯೂ ನೋಡಲಿಲ್ಲ, ಕೇವಲ, memorandum ಕೊಟ್ಟು ಕೈತೊಳೆದುಕೊಂಡರು. ಅನಂತರ, ಬ್ರಿಜೇಶ್ ಕುಮಾರ್ ಎನ್ನುವ Central Team ನವರು ಡಿಸೆಂಬರ್‌ನಲ್ಲಿ 4–5 ದಿನ 10–12 ಜಿಲ್ಲೆಗಳಿಗೆ ಹೋಗಿ ನೋಡಿಕೊಂಡು ಹೋದರು. ಅವರ ಪಾಡಿಗೆ ಅವರು ಕುಳಿತರು, ಇವರ ಪಾಡಿಗೆ ಇವರು ಕುಳಿತರು. ಇವರು ಮಲಗಿದ್ದಾರೆ, ಅವರು ಅಲ್ಲಿದ್ದಾರೆ. ಒಂದು ದಿನವಾದರೂ pursue ಮಾಡುವುದಕ್ಕೆ ಹೋದರೇ? Follow-up ಮಾಡಿದ್ದಾರೆಯೇ? ಮಾಡಲೇ ಇಲ್ಲ. Memorandum ಕೊಟ್ಟರೆ, ಅಷ್ಟಕ್ಕೇ ತಮ್ಮ ಜವಾಬ್ದಾರಿ ಮುಗಿಯಿತು ಎಂದು ಭಾವಿಸಿದರು 2600 ಕೋಟಿ ರೂ. ನಷ್ಟವಾಗಿದೆಯೆಂದು memorandum ಕೊಟ್ಟಿದ್ದೇವೆಂದು ಸುಮ್ಮನಾದರು. ಇಲ್ಲಿಯವರೆಗೆ, 4500 ಕೋಟಿ ರೂಪಾಯಿ ರೈತರಿಗೆ ನಷ್ಟವಾಗಿದೆ ಎಂದು ಹೇಳುತ್ತಾರೆ. 2001ನೇ ಇಸವಿಯಿಂದ ಇವತ್ತಿನವರೆಗೆ ಒಂದಿಲ್ಲೊಂದು ಬರಗಾಲ, ಪ್ರವಾಹ ಬಂದಿದೆ. ಸರ್ಕಾರ ಅಂದಾಜು ಮಾಡಿರುವ ಪ್ರಕಾರ ಸುಮಾರು 85 ಸಾವಿರ ಕೋಟಿ ರೂಪಾಯಿ ಕರ್ನಾಟಕ ರಾಜ್ಯದ ರೈತರಿಗೆ ನಷ್ಟವಾಗಿದೆ. ಈ ನಷ್ಟವನ್ನು ಯಾರು ತುಂಬಿಕೊಡುತ್ತಾರೆ? ಹಾಗಾದರೆ, ರೈತ ಉದ್ಧಾರವಾಗು ಎಂದರೆ ಹೇಗೆ ಆಗುತ್ತಾರೆ? ಒಂದು ಕಡೆ ಕೃಷಿ ಬಜೆಟ್ ಮಂಡಿಸುತ್ತೇವೆಂದು ಹೇಳುತ್ತಾರೆ. ಇನ್ನೊಂದು ಕಡೆ ರೈತರು ಬರಗಾಲಕ್ಕೆ ಸಿಕ್ಕಿಹಾಕಿಕೊಂಡಿದ್ದಾರೆ. ಅವರು ಬೆಳೆದ ಪದಾರ್ಥಗಳನ್ನು ಕೃಷಿ ಇಲಾಖೆಯವರು ಕೊಂಡುಕೊಳ್ಳುವುದಿಲ್ಲ. ಸದನದಲ್ಲಿ ಕೃಷಿ ಮಂತ್ರಿಯವರಿಲ್ಲ. ನೀವು ಕೃಷಿ ಮಂತ್ರಿಯಾಗಿದ್ದೀರಿ. ಜ್ಯೋತಿ ಬತ್ತ ಬೆಳೆಯಿರಿ ಎಂದು ಹೇಳಿ ಇವರೇ ಬಿತ್ತನೆ ಬೀಜ ಕೊಟ್ಟರು. ಜ್ಯೋತಿ ಬತ್ತವನ್ನು ಬೆಳೆದು ತೆಗೆದುಕೊಳ್ಳಿ ಎಂದು ರೈತರು ಕೇಳಿದರೆ, ಇಳುವರಿ ಕಡಿಮೆ ಇದೆ ತೆಗೆದುಕೊಳ್ಳುವುದಿಲ್ಲ ಎಂದು ಹೇಳಿದರು. ಬಚ್ಚೇಗೌಡರೆ, ನಾನು ರಾಜ್ಯ ಮಟ್ಟದ ಅಧಿಕಾರಿಗಳಿಗೆ ಫೋನ್ ಮಾಡಿ ಕೇಳಿದೆ, ಅದಕ್ಕೆ ಅವರು ಸರ್ಕಾರ ತೆಗೆದುಕೊಳ್ಳಬೇಡಿ

ಎಂದು ಹೇಳಿದೆ ಎಂದು ತಿಳಿಸಿದರು. ಹಾಗಾದರೆ, ಆ ರೈತರು ಎಲ್ಲಿ ಹೋಗಬೇಕು. ಬತ್ತ ಬೆಳೆಯುವುದಕ್ಕೆ ಬೀಜ ಕೊಟ್ಟವರು ನೀವು. ರೈತರು ಬತ್ತ ಬೆಳೆದರು. ಇಳುವರಿ ಕಡಿಮೆ ಆಗುತ್ತದೆಂದು ಬತ್ತ ತೆಗೆದುಕೊಳ್ಳವುದಿಲ್ಲವೆಂದರೆ ಅವರು ಎಲ್ಲಿಗೆ ಹೋಗಬೇಕು? ತೊಗರಿ ತೆನೆ ತೆಗೆದುಕೊಳ್ಳಲಿಲ್ಲ, ಬಂದ್ ಆಗಿದೆ.

ಶ್ರೀ ಹೆಚ್. ಹಾಲಪ್ಪ : Central Government ತೆಗೆದು ಕೊಳ್ಳುವುದಿಲ್ಲ, ಬತ್ತ ಅವರು ತೆಗೆದುಕೊಳ್ಳುವುದು.

ಶ್ರೀ ಸಿದ್ದರಾಮಯ್ಯ : ನೀವು ಏನು ಮಾಡಿದಿರಿ?

ಶ್ರೀ ಹೆಚ್. ಹಾಲಪ್ಪ : ಅವರು ತೆಗೆದುಕೊಳ್ಳಬೇಕು. ಅವರ norms ಅದು.

ಶ್ರೀ ಸಿದ್ದರಾಮಯ್ಯ : ರೈತರು ಜ್ಯೋತಿ ಬತ್ತ ತೆಗೆದುಕೊಂಡು ಹೋದರೆ ನೀವು godown ಇಲ್ಲ ಎಂದು ಹೇಳುತ್ತೀರಿ. ಹಾಗಾದರೆ ನೀವು Agriculture Department ನಿಂದ ಬೀಜ ಏಕೆ ಕೊಟ್ಟಿರಿ? ಕೊಟ್ಟಮೇಲೆ ನೀವು ತೆಗೆದುಕೊಳ್ಳಬೇಕು. ರೈತನಿಗೆ ಬೀಜ ಕೊಟ್ಟು ಬೆಳೆಯುವುದಕ್ಕೆ ಹೇಳಿಬಿಟ್ಟು ಬತ್ತ ತೆಗೆದುಕೊಳ್ಳುವುದಿಲ್ಲವೆಂದರೆ ಹೇಗೆ?

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : ಚಾಮರಾಜನಗರದಲ್ಲಿ ರೈತರಿಂದ ಕೊಂಡ 25 ಸಾವಿರ ಕ್ವಿಂಟಾಲ್ ಬತ್ತಕ್ಕೆ Food Corporation ನಿಂದ payment ಆಗಿಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಕೇಂದ್ರ ಸರ್ಕಾರ ಜ್ಯೋತಿ ಬತ್ತ ಬೆಳೆಯಲಿಕ್ಕೆ ಬೀಜ ಕೊಟ್ಟಿಲ್ಲ. State Government ನವರು ಕೊಟ್ಟಿರುವುದು. ನೀವು ಬಿತ್ತನೆ ಬೀಜ ಕೊಡಬಾರದಾಗಿತ್ತು. ಇದನ್ನು ನಾವು ತೆಗೆದುಕೊಳ್ಳುವುದಿಲ್ಲ, ಇದಕ್ಕೆ ಮಾರ್ಕೆಟ್ ಇಲ್ಲ, ಇಳುವರಿ ಇಲ್ಲ, ನಾವು ಬೆಲೆ ಕೊಡುವುದಿಲ್ಲ ಎಂದು ಹೇಳಿ ಬೀಜ ಕೊಡಬಾರದಾಗಿತ್ತು, ಬೆಳೆಯಬೇಡಿ ಎಂದು ಹೇಳಬೇಕಾಗಿತ್ತು. ಹಾಗಾದರೆ ಕೃಷಿ ಇಲಾಖೆ ಇರುವುದಕ್ಕೆ ಏತಕ್ಕೆ? ಬೀಜ ಕೊಟ್ಟು ಬೆಳೆ ತೆಗೆದು ಕೊಳ್ಳುವುದಿಲ್ಲವೆಂದರೆ ಹೇಗೆ? I demand, ಮಾನ್ಯ ಶೆಟ್ಟರ್‌ರವರೆ, ಈಗಲಾದರೂ ಕೂಡ ಯಾರು ತೆಗೆದುಕೊಳ್ಳುವುದಿಲ್ಲ ಅವರು ತೆಗೆದು ಕೊಳ್ಳುವುದಕ್ಕೆ ಹೇಳಬೇಕು. ರೈತರು ಈಗ ಜ್ಯೋತಿಬತ್ತ ಬೆಳೆದಿದ್ದಾರೆ. ಅದನ್ನು ತೆಗೆದುಕೊಳ್ಳಬೇಕೋ, ಬೇಡವೋ? ಆ ಜ್ಯೋತಿ ಬತ್ತ ಬೆಳೆದರೆ 3 ಕೆ.ಜಿ.

ಅಥವಾ 4 ಕೆ.ಜಿ. ಇಳುವರಿ ಕಡಿಮೆಯಾಗುತ್ತದೆಯಂತೆ. ಒಂದು ಕ್ವಿಂಟಾಲ್ ಬತ್ತಕ್ಕೆ ಅಂದರೆ 100 ಕೆ.ಜಿ. ಬತ್ತಕ್ಕೆ 65 ಅಥವಾ 66 ಕೆ.ಜಿ. ಅಕ್ಕಿ ಬರಬೇಕು. ಆ ರೀತಿ ಬರದೆ 59 ಕೆ.ಜಿ., 60 ಕೆ.ಜಿ. ಬರುತ್ತದೆಂದು ಹೇಳಿ ತೆಗೆದು ಕೊಳ್ಳುವುದಿಲ್ಲವೆಂದರೆ ಹೇಗೆ? ಹಾಗಾದರೆ, ರೈತರು ಬೀದಿ ಪಾಲಾಗಬೇಕೇ? ಹಾಗಾದರೆ, ನೀವು ಸೆಪರೇಟ್ ಆಗಿ ಕೃಷಿ ಬಜೆಟ್ ಮಂಡಿಸಿರುವ ಕಾಳಜಿ ಆದರೂ ಏನು?

ಶ್ರೀ ಸಿ.ಟಿ. ರವಿ : ಕಾಳಜಿ ಇರುವುದಕ್ಕಾಗಿಯೇ zero per cent interest ಕೊಟ್ಟಿರುವುದು. ತಾವೂ ಹಣಕಾಸು ಸಚಿವರಾಗಿದ್ದಿರಿ.

(ಗೊಂದಲ)

ಶ್ರೀ ಸಿ.ಟಿ. ರವಿ : ಇದೇನು ಸುಳ್ಳೇ? 18% ಬಡ್ಡಿ ನೀವು ಹಾಕುತ್ತಿದ್ದಿರಿ. ತಾವು ಹಣಕಾಸು ಸಚಿವರಾಗಿದ್ದಿರಿ.

(ಗೊಂದಲ)

ಶ್ರೀ ಸಿ.ಟಿ. ರವಿ : ನಾವು zero per cent interest ಗೆ ಹಣ ಕೊಡುತ್ತಿದ್ದೇವೆ.

(ಗೊಂದಲ)

ಶ್ರೀ ಸಿ.ಟಿ. ರವಿ : ನೀವೆಲ್ಲ ರೈತರ ಮನೆ ಜಪ್ತಿ ಮಾಡಿಕೊಂಡಿಲ್ಲವೆ? ನಮ್ಮ ಸರ್ಕಾರ ಒಬ್ಬ ರೈತರ ಮನೆಯನ್ನೂ ಜಪ್ತಿ ಮಾಡಲಿಲ್ಲ. ತಾವೂ ಹಣಕಾಸು ಸಚಿವರಾಗಿದ್ದಾಗಲೂ ರೈತರ ಮನೆ ಜಪ್ತಿ ಮಾಡಿದ್ದೀರಿ.

(ಗೊಂದಲ)

ಅಧ್ಯಕ್ಷರು : Please ಕುಳಿತುಕೊಳ್ಳಿ. ವಿರೋಧ ಪಕ್ಷದ ನಾಯಕರು ಮಾತನಾಡಲಿ. ರವಿಯವರೆ ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು : Please ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಸಿ.ಟಿ. ರವಿ : ಸುವರ್ಣ ಭೂಮಿ ಯೋಜನೆಯಲ್ಲಿ 10 ಸಾವಿರ ರೂಪಾಯಿ ರೈತರಿಗೆ ಸಿಗಲಿಲ್ಲವೇ? ಆ ಹಣವನ್ನು ನೀವು ಕೊಟ್ಟಿದ್ದೀರಾ?

(ಗೊಂದಲ)

ಶ್ರೀ ಸಿ.ಟಿ. ರವಿ : ನೀವು ಏನು ಮಾಡಿದ್ದೀರಿ ಹೇಳಿ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : ಆ 10 ಸಾವಿರದಲ್ಲಿ ಎರಡೆರಡು, ಮೂರು ಮೂರು ಸಾವಿರ ಹೋಗುತ್ತದೆ.

(ಗೊಂದಲ)

ಶ್ರೀ ಸಿ.ಟಿ. ರವಿ : ನಿಮ್ಮ ಕ್ಷೇತ್ರದಲ್ಲಿ ನೀವು forgery ಕೊಡಿಸಿದ್ದೀರಿ.

(ಗೊಂದಲ)

ಶ್ರೀ ಸಿ.ಟಿ. ರವಿ : ಮಾನ್ಯ ಅಧ್ಯಕ್ಷರೆ, note this point. ಇವರ ಕ್ಷೇತ್ರದಲ್ಲಿ ಆ ಶಾಸಕರು forgery ಕೊಡಿಸಿದ್ದಾರೆ.

(ಗೊಂದಲ)

ಅಧ್ಯಕ್ಷರು : Please ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಸಿ.ಟಿ. ರವಿ : ಅವರ ಕ್ಷೇತ್ರದಲ್ಲಿ ರೈತರಿಗೆ forgery ಕೊಡಿಸಿದ್ದಾರೆ.

(ಗೊಂದಲ)

ಶ್ರೀ ಸಿ.ಟಿ. ರವಿ : ಅಂದರೆ ಇವರ ಕ್ಷೇತ್ರದಲ್ಲಿ ರೈತರು forgery, ವೋಟು forgery.

(ಗೊಂದಲ)

ಅಧ್ಯಕ್ಷರು : ಆಯಿತು, ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು : ಶಿವಲಿಂಗೇಗೌಡರೆ, ಕುಳಿತುಕೊಳ್ಳಿ. ಅಶೋಕ್‌ರವರೆ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : 1 ಸಾವಿರ ಕೋಟಿ ರೂ.ಗಳಲ್ಲಿ 250 ಕೋಟಿ ರೂಪಾಯಿಗಳನ್ನು ಮಾತ್ರ ಇವರ ಸರ್ಕಾರ ಖರ್ಚು ಮಾಡಿರುವುದು. ಸುವರ್ಣ ಭೂಮಿಯಲ್ಲಿ 10–10 ಸಾವಿರ ರೂ. ಎಂದು ಸರ್ಕಾರದ Statement ನಲ್ಲಿಯೇ ಹೇಳುತ್ತಾರೆ.

(ಗೊಂದಲ)

ಶ್ರೀ ಸಿ.ಟಿ. ರವಿ : ಬನ್ನಿ, ನಮ್ಮ ಕ್ಷೇತ್ರದಲ್ಲಿ 9 ಸಾವಿರ ರೈತರಿಗೆ ಕೊಡಿಸಿದ್ದೇನೆ. ನಾನು forgery ಕೊಡಿಸಿಲ್ಲ. ನೀವು forgery ಕೊಡಿಸಿದ್ದೀರಿ.

(ಗೊಂದಲ)

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : ಮೊನ್ನೆ ತಾನೆ ಜನರು ಉಪಚುನಾವಣೆಯಲ್ಲಿ ತೀರ್ಮಾನ ಕೊಟ್ಟಿದ್ದಾರೆ.

ಶ್ರೀ ವಿ. ಮುನಿಯಪ್ಪ : ಇವರು ಲಾಟರಿ ಎತ್ತಿದರು. ಹಣ ಕೊಟ್ಟಿಲ್ಲ.

(ಗೊಂದಲ)

ಡಾ: ಹೆಚ್.ಸಿ. ಮಹದೇವಪ್ಪ : ಸರ್ಕಾರದಲ್ಲಿ ರೈತರು ಕೊಟ್ಟಂಥ ಬತ್ತವನ್ನು ಖರೀದಿ ಮಾಡಿ ಸಂಗ್ರಹ ಮಾಡುವುದಕ್ಕೆ godown ಇಲ್ಲದೆ ಖಾಸಗಿಯವರಿಗೆ ಕೊಟ್ಟಿದ್ದಾರೆ. ಖಾಸಗಿಯವರು ರೈತರಿಂದ ಒಂದು ಕ್ವಿಂಟಾಲ್ ಬತ್ತವನ್ನು 900 ರೂ. ನಂತೆ ಖರೀದಿ ಮಾಡಿ ಅವರ RTC ಇಟ್ಟುಕೊಂಡು ಸರ್ಕಾರ ಕೊಡುವಂಥ 1300 ರೂ.ಗಳನ್ನು ಇವರು ಮಾಡಿಕೊಂಡು ರೈತರಿಗೆ ಟೋಪಿ ಹಾಕುತ್ತಿದ್ದಾರೆ. ಒಂದು ಕಡೆ ರೈತರಿಗೆ ದಳ್ಳಾಳಿಗಳಿಂದ ಟೋಪಿ, ಈ ಕಡೆ ಸರ್ಕಾರವೂ ಬೆಂಬಲ ಬೆಲೆ ಕೊಡುತ್ತಿಲ್ಲ. ಕಾಳಜಿ ಇದೆ ಎಂದು ಹೇಳಿ ಅಂತಿಮವಾಗಿ ರೈತ ಎಲ್ಲಿದ್ದ ಅಲ್ಲಿಯೇ ಇದ್ದಾನೆ. ಇದನ್ನೆಲ್ಲ ಸರಿಪಡಿಸದಿದ್ದರೆ ನೀವು ಮಾಡಿದಂಥ ಯೋಜನೆಗಳೇ ಆಗಲಿ, ಘೋಷಣೆ ಮಾಡಿದ ಬೆಂಬಲ ಬೆಲೆಯಾಗಲಿ, ನಿಜವಾಗಿ ರೈತನಿಗೆ ತಲುಪದೆ ಅವನು ಸಂಕಷ್ಟದಲ್ಲಿಯೇ ಇದ್ದಾನೆ. ಇದು ವಸ್ತುಸ್ಥಿತಿ. ಇನ್ನು, ಜ್ಯೋತಿ ಭತ್ತ ಬೆಳೆಯಬೇಕೆಂದು ಬಿತ್ತನೆ ಬೀಜ ಕೊಟ್ಟಮೇಲೆ ಇಳುವರಿ ಕಡಿಮೆಯಾಗಿರುವುದು ಒಂದು ಕಡೆಯಾದರೆ, ಅದು ಕೆಂಪು ಅಕ್ಕಿಯಾಗಿದ್ದು ಕೇರಳಕ್ಕೆ ಮಾತ್ರ supply ಆಗುವಂಥದ್ದು. ಆವಾಗ ಇವರು ಖರೀದಿ ಮಾಡಿದ್ದು, ಕೇರಳದವರು ಆ ಅಕ್ಕಿಯನ್ನು ಕೊಂಡುಕೊಳ್ಳುವುದನ್ನು ನಿಲ್ಲಿಸಿದ್ದಾರೆ. ಸರ್ಕಾರ ಜ್ಯೋತಿ ಭತ್ತವನ್ನು ಖರೀದಿ ಮಾಡಿ, ಕೇರಳದವರಿಂದ demand ಬಂದಾಗ ಸರ್ಕಾರ ರೈತರಿಂದ ಖರೀದಿ ಮಾಡಿ ಶೇಖರಣೆ ಮಾಡಿಟ್ಟ ಭತ್ತವನ್ನು ಮಾರಾಟ ಮಾಡಿ ರೈತರ ನೆರವಿಗೆ ಬರಬೇಕು. ಆ ರೀತಿ ಮಾಡುವುದನ್ನು ಬಿಟ್ಟು, ನಾವು ತೆಗೆದುಕೊಳ್ಳುವುದಿಲ್ಲ, ಬೇಡ ಎಂದು ಹೇಳಿದರೆ ರೈತರಿಗೆ ಅನ್ಯಾಯ ಮಾಡಿದ ಹಾಗೆ ಆಗುತ್ತದೆ. ಆ ಜ್ಯೋತಿ ಭತ್ತವನ್ನು ಬೆಳೆಯುವುದಕ್ಕೆ ಸರ್ಕಾರ ಬೆಂಬಲ, ಪ್ರೋತ್ಸಾಹ ಕೊಟ್ಟಿದೆ. ನಂಜನಗೂಡು, ಬನ್ನೂರು, ಟಿ. ನರಸೀಪುರ, ಕೆ.ಆರ್. ನಗರ, ಕೊಳ್ಳೇಗಾಲ, ಹೀಗೆ ರಾಜ್ಯದ ಅನೇಕ ಕಡೆ ಬೆಳೆದಂಥ ಜ್ಯೋತಿ ಭತ್ತವನ್ನು ಸರ್ಕಾರ ತೆಗೆದುಕೊಳ್ಳದೆ ಈ ತರಹ ನಡೆಯುತ್ತಿದೆ. ಹಾಗೆಯೇ, ಕೆಲವು ನಿರ್ದಿಷ್ಟವಾದ

ಮಿಲ್ ಮಾಲೀಕರು ತಾವೇ ರೈತರಿಗೆ 900 ರೂ.ಗಳಿಗೆ ಭತ್ತವನ್ನು ಖರೀದಿ ಮಾಡಿದ್ದಾರೆ. RTC ಗೆ ಕ್ವಿಂಟಾಲ್ ಒಂದಕ್ಕೆ ಮೂರು ಸಾವಿರ, ನಾಲ್ಕು ಸಾವಿರ ರೂ.ಗಳಿಗೆ ಖರೀದಿ ಮಾಡಿದ್ದೇವೆಂದು ಹೇಳಿ ಅದನ್ನು ಖರೀದಿ ಮಾಡಿ ಇಟ್ಟುಕೊಂಡು, ಸರ್ಕಾರ ಕೊಡುವ ಬೆಂಬಲ ಬೆಲೆಯಲ್ಲಿ 1300 ರೂ.ಗಳನ್ನು ಇವರು ತೆಗೆದುಕೊಳ್ಳುತ್ತಿದ್ದಾರೆ. ಇವರಿಗೆ 400 ರೂಪಾಯಿ ಹೆಚ್ಚುವರಿ ಸಿಗುತ್ತಿದೆ. ರೈತರು ಎಷ್ಟು ಖರ್ಚು ಮಾಡಿ ಬೆಳೆದಿದ್ದಾರೆ ಅಷ್ಟೇ ಅವರಿಗೆ ಸಿಗುತ್ತಿದೆ. ಇಲ್ಲಿ ನಾವೆಲ್ಲ ಕುಳಿತುಕೊಂಡು ರೈತರಿಗೆ ಬೆಂಬಲ ಬೆಲೆ ಕೊಟ್ಟೆವು, ರೈತರಿಗೆ 1300 ರೂ. ಸಿಕ್ಕಿತು ಎಂದು ಗೋಳು ಹೊಯ್ದು ಕೊಳ್ಳುತ್ತಿದ್ದೇವೆ. ಆದ್ದರಿಂದ, ಈ ವಸ್ತು ಸ್ಥಿತಿಯನ್ನು ಅರ್ಥ ಮಾಡಿಕೊಂಡು ಸರ್ಕಾರ ನಿರ್ದಿಷ್ಟವಾದ, ನಿಷ್ಕುರವಾದ ಕ್ರಮ ತೆಗೆದುಕೊಳ್ಳಬೇಕೇ ಹೊರತು, ಸುಮ್ಮನೆ ಮಾತಾಡಿಕೊಂಡು ನಾನು ರೈತರ ಪರ, ನೀನೂ ರೈತರ ಪರ ಎಂದು ಹೇಳಿದರೆ, benefits will not reach to the farmers.

ಕುಮಾರಿ ಶೋಭಾ ಕರಂದ್ಲಾಜೆ (ಇಂಧನ, ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು) : ಮಾನ್ಯ ಅಧ್ಯಕ್ಷರೆ, ಜ್ಯೋತಿ ಭತ್ತದ ಸಂಬಂಧ ನಾವು ಕೇಂದ್ರ ಸರ್ಕಾರಕ್ಕೆ ಹಲವಾರು ಸಲ ಪತ್ರ ಬರೆದಿದ್ದೇವೆ. ಜ್ಯೋತಿ ಭತ್ತವನ್ನು ಖರೀದಿ ಮಾಡಬಾರದೆಂದು ಸ್ಪಷ್ಟವಾಗಿ ಕೇಂದ್ರ ಸರ್ಕಾರ ರಾಜ್ಯ ಸರ್ಕಾರ ಗಳಿಗೆ ತಿಳಿಸಿದೆ. ಜ್ಯೋತಿ ಭತ್ತವನ್ನು ಕುಸುಬಲಕ್ಕಿ ಅಂದರೆ boiled rice ಗೆ ಉಪಯೋಗ ಮಾಡುತ್ತಾರೆ. ಈ boiled rice ಅನ್ನು ದಕ್ಷಿಣ ಕನ್ನಡ ಮತ್ತು ಉಡುಪಿಯಲ್ಲಿ ಮಾತ್ರ ಉಪಯೋಗಿಸುತ್ತಾರೆ. ಆದರೆ, ಈ ಜ್ಯೋತಿ ಭತ್ತದ boiled rice ಅನ್ನು ಅಲ್ಲಿಯೂ ಸಹ ಉಪಯೋಗಿಸುವುದಿಲ್ಲ, ಈ boiled rice ಅನ್ನು ಕೇವಲ ಕೇರಳದಲ್ಲಿ ಮಾತ್ರ ಉಪಯೋಗಿಸುತ್ತಾರೆ. ಅದಕ್ಕಾಗಿ ನಾವು ಕೇಂದ್ರದ ಆಹಾರ ಸಚಿವರಾದ ಪ್ರೊ.ಕೆ.ವಿ. ಥಾಮಸ್ ಇವರು ಕೇರಳದವರಾಗಿದ್ದು ಇವರಿಗೆ ನಾವು ಹೇಳಿದ್ದೇವೆ ಮತ್ತು FCI ನ Chairman ರಾದ ಶಿರಾಜ್ ಹುಸೇನ್ ಅವರಿಗೂ ನಾವು ಪತ್ರ ಬರೆದಿದ್ದೇವೆ ಮತ್ತು ನೇರವಾಗಿ ಮಾತುಕತೆ ನಡೆಸಿದ್ದೇವೆ. ನಮ್ಮ ರಾಜ್ಯದಲ್ಲಿ ಚಾಮರಾಜನಗರ, ಮೈಸೂರು ಮತ್ತು ಶಿವಮೊಗ್ಗದ ಕೆಲವು ಭಾಗಗಳಲ್ಲಿ ಜ್ಯೋತಿ ಭತ್ತವನ್ನು ಬೆಳೆದಿದ್ದಾರೆ. ಆದರೆ, FCI ಮತ್ತು ಕೇಂದ್ರ ಸರ್ಕಾರ ಸ್ಪಷ್ಟವಾಗಿ ಖರೀದಿ ಮಾಡಬಾರದೆಂದು ಹೇಳಿದ್ದಾರೆ. ಈ ಸಮಸ್ಯೆ ಇದೆ. ಈಗಾಗಲೇ ನಾವು

ಮೈಸೂರು ಮತ್ತು ಚಾಮರಾಜನಗರದಲ್ಲಿ ಜ್ಯೋತಿ ಭತ್ತವನ್ನು ಖರೀದಿ ಮಾಡಿದ್ದೇವೆ. ಅದನ್ನು ವಿಲೇವಾರಿ ಮಾಡುವುದಕ್ಕೆ. ಕೇರಳಕ್ಕೆ ಕಳುಹಿಸಿ ಕೊಡುವುದಕ್ಕೆ ನಮಗೆ ಅವಕಾಶ ಮಾಡಿಕೊಡಬೇಕೆಂದು ಹೇಳಿದ್ದೇವೆ. ಕೇರಳ ರಾಜ್ಯ ಸರ್ಕಾರದೊಂದಿಗೆ ಸಹ ನಮ್ಮ ರಾಜ್ಯ ಸರ್ಕಾರ ಸಂಪರ್ಕದಲ್ಲಿದೆ. ದಯಮಾಡಿ, ನಮ್ಮ ರಾಜ್ಯದಲ್ಲಿ ದಾಸ್ತಾನು ಆಗಿರುವಂಥ ಜ್ಯೋತಿ ಭತ್ತವನ್ನು ಖರೀದಿ ಮಾಡಬೇಕೆಂದು ಅವರಿಗೂ ಪತ್ರ ಬರೆದಿದ್ದೇವೆ. ಇದರ ಆಧಾರದಲ್ಲಿ ಅವರು ಈಗ ಜ್ಯೋತಿ ಭತ್ತವನ್ನು lab test ಗೂ ಕಳುಹಿಸಿದ್ದಾರೆ. ಆ lab test ನ ವರದಿ ಬಂದ ತಕ್ಷಣ ನಾವು ಇದರ ಬಗ್ಗೆ ಯೋಚನೆ ಮಾಡುತ್ತೇವೆನ್ನುವ ವಿಚಾರವನ್ನು ಕೇಂದ್ರ ಸರ್ಕಾರ ಸ್ಪಷ್ಟವಾಗಿ ಹೇಳಿದೆ. ಈ lab ನವರು ಏನು test ಮಾಡುತ್ತಾರೆ, ಆ test ನ ವರದಿ ಇನ್ನು ಒಂದು ವಾರದಲ್ಲಿ ಬರುತ್ತದೆ. ಆ ತಕ್ಷಣ ಅನುಮತಿಯನ್ನು ಕೊಡಬಹುದೆನ್ನುವ ವಿಶ್ವಾಸ ನಮಗಿದೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಕೇಂದ್ರ ಸರ್ಕಾರ ತೆಗೆದು ಕೊಳ್ಳುತ್ತದೆಂದು ಹೇಳಿದೆಯೋ, ತೆಗೆದುಕೊಳ್ಳುವುದಿಲ್ಲವೆಂದು ಹೇಳಿದೆಯೋ ಅದಲ್ಲ. ರಾಜ್ಯ ಸರ್ಕಾರ Market Intervention Scheme ಗೆ 1 ಸಾವಿರ ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆಂದು ಬಜೆಟ್‌ನಲ್ಲಿ ಹೇಳಿದೆ. ಕೇಂದ್ರ ಸರ್ಕಾರ ತೆಗೆದುಕೊಳ್ಳದಿದ್ದರೆ ಹೋಗಲಿ. ಕೇರಳದವರಿಗೆ ಈ ಅಕ್ಕಿ ಬೇಕು. ಹಾಗಾಗಿ ನಮ್ಮ ರೈತರಿಂದ ಜ್ಯೋತಿ ಭತ್ತವನ್ನು ಕೊಂಡು ನೀವು ಕೇರಳದವರಿಗೆ ಮಾರಿ. You intervene and stabilize the price. Purchase from the farmers, spending money from the Government of Karnataka. Whether Government of India accept it or not, it is immaterial. In Order to help the farmers of the Karnataka, you purchase whether its jyothi or any other variety. ಕೇರಳ ರಾಜ್ಯಕ್ಕೆ ಕೊಡಿ. Who is the right person? Seed ಕೊಟ್ಟವರು ಯಾರು? ಆ seed ಅನ್ನು ರೈತರೇ ಬೆಳೆದುಕೊಂಡಿಲ್ಲ. ಆ seed ಅನ್ನು ಕೊಟ್ಟವರು Department ನವರು ಈಗ ಇಳುವರಿ ಕಮ್ಮಿ ಆಗುತ್ತದೆ ಎಂದು ಹೇಳಿದರೆ, ಆಗ ಆ seed ಅನ್ನು ರೈತರಿಗೆ ಕೊಡುವಾಗ ಇಲಾಖೆ ಯವರಿಗೆ ಬುದ್ಧಿ ಇರಲಿಲ್ಲವೇ? ತಪ್ಪೋ, ಸರಿಯೋ ರೈತರು ಬೆಳೆದು ಕಷ್ಟಕ್ಕೆ ಸಿಕ್ಕಿಹಾಕಿಕೊಂಡಿದ್ದಾರೆ. ಇಂಥ ತೊಂದರೆಯಲ್ಲಿರುವಾಗ ರೈತರ ಸಹಾಯಕ್ಕೆ ಸರ್ಕಾರ, ಇಲಾಖೆ ಹೋಗಬೇಕು. ಜ್ಯೋತಿ ಭತ್ತವನ್ನೇ ತೆಗೆದುಕೊಳ್ಳುವು

ದಿಲ್ಲವೆಂದು ಸರ್ಕಾರ, ಇಲಾಖೆ ಹೇಳಿದರೆ where will they go? ಆಮೇಲೆ ಆ ಭತ್ತವನ್ನು ತೆಗೆದುಕೊಳ್ಳುವವರು ಯಾರು? ಆ ಅಕ್ಕಿಯನ್ನು ಊಟ ಮಾಡುವುದಕ್ಕಾಗುವುದಿಲ್ಲ, ಅದನ್ನು ಮಾರಬೇಕಾಗುತ್ತದೆ. ಸರ್ಕಾರದಿಂದ ಒಂದು ಕಡೆ godown ಗಳಿಲ್ಲ ಎಂದು ಹೇಳುತ್ತಾರೆ. ಈ ಬಗ್ಗೆ ನಿಮ್ಮ ಅಧಿಕಾರಿಗಳ ಜೊತೆ ಮಾತನಾಡಿ ಈ ಮಾತನ್ನು ಹೇಳುತ್ತಿದ್ದೇನೆ. ತಿಂಗಳು ಗಟ್ಟಲೆ ಭತ್ತ ರೈತರಿಂದ ತೆಗೆದುಕೊಳ್ಳುವುದಿಲ್ಲ, ತೆಗೆದುಕೊಂಡರೂ ತಿಂಗಳು ಗಟ್ಟಲೆ ಆದರೂ ರೈತರಿಗೆ ಹಣ ಕೊಡುವುದಿಲ್ಲ. ಇದೇ ರೀತಿ ತೊಗರಿ ಬೆಳೆಗೂ ಸಹ ಆಗಿದೆ. ತೊಗರಿ ತೆಗೆದುಕೊಳ್ಳುತ್ತೇವೆಂದು ಹೇಳಿ ಹಾಗೆಯೇ ಮುಚ್ಚಿಬಿಟ್ಟಿರು. ನಮ್ಮ ಕಡೆಯೆಲ್ಲ ಅರಿಶಿಣ ಬೆಳೆದಿದ್ದಾರೆ. ಚಾಮರಾಜನಗರ, ಯಳಂದೂರು, ಕೊಳ್ಳೇಗಾಲ ಈ ಭಾಗದಲ್ಲೆಲ್ಲ ಅರಿಶಿಣ ಬೆಳೆದಿದ್ದಾರೆ. ಆದರೆ, ಅರಿಶಿಣವನ್ನು ರೈತರಿಂದ ತೆಗೆದುಕೊಳ್ಳುವವರು ಇಲ್ಲ. ಅರಿಶಿಣ ಕ್ವಿಂಟಲ್ ಒಂದಕ್ಕೆ 17 ಸಾವಿರ ರೂ. ಇದ್ದದ್ದು ಈಗ ಎರಡೂವರೆಯಿಂದ ಮೂರು ಸಾವಿರ ರೂ.ಗಳಿಗೆ ಇಳಿದಿದೆ. ಈಗ ಆ ರೈತರ ಕಷ್ಟಕ್ಕೆ ನೆರವಾಗುವುದಕ್ಕೆ ಹೋಗುವವರು ಯಾರು? ರೈತರಾಗಿ ರೈತ ಕುಟುಂಬದಲ್ಲಿ ಅವರು ಹುಟ್ಟಿದ್ದೇ ಶಾಪವೇ? ಹಾಗಾದರೆ, ಸರ್ಕಾರದಿಂದ ಮಂಡಿಸಿದ ಕೃಷಿ ಬಜೆಟ್ ಎಂದರೆ ಏನು? ಆದ್ದರಿಂದ, Market Intervention scheme purpose ಏನೆಂದರೆ, ಬೆಲೆ ಬಿದ್ದುಹೋದಾಗ ರೈತರಿಗೆ ಅನ್ಯಾಯವಾಗಬಾರದು, ಅವರಿಗೆ ನ್ಯಾಯ ಸಿಗಬೇಕೆನ್ನುವ ಕಾರಣಕ್ಕೋಸ್ಕರವಾಗಿ ಈ Market Intervene ಆಗಿ ಸರ್ಕಾರ ಕೊಂಡುಕೊಳ್ಳಬೇಕು. ಅದಕ್ಕೋಸ್ಕರ Market Intervention scheme ಬಂದಿರುವಂಥದ್ದು. ಎಲ್ಲಿಯಾದರೂ ಇಟ್ಟುಕೊಳ್ಳಲಿ. ನಷ್ಟವೇ ಆಯಿತೆಂದು ಇಟ್ಟುಕೊಳ್ಳೋಣ. So, it is a responsibility of the Government. ಅದರಿಂದ ನಮಗೆ ನಷ್ಟವಾಗಿ ಬಿಡುತ್ತದೆ, godown ಇಲ್ಲ, ಕೇಂದ್ರ ಸರ್ಕಾರ ಕೊಂಡುಕೊಳ್ಳುವುದು ಬೇಡ ಎಂದು ಹೇಳುತ್ತಾರೆ ಎಂದು ಹೇಳುವುದು ಸರಿಯಲ್ಲ. ಹಾಗಾದರೆ, ನೀವು ರೈತರ ಪರವಾಗಿ ಹೇಗೆ ನಿಲ್ಲುತ್ತೀರಿ? ಹಾಗಾದರೆ ರೈತರ ಪರವಾದ ನಿಮ್ಮ ನಿಲುವು ಏನು? ನಿಮ್ಮ ಕಾಳಜಿ ಏನು? ಕೇವಲ ರೈತರ ಪರವಾದ ಬಜೆಟ್ ಮಂಡಿಸಿದ್ದೇವೆಂದು ಹೇಳಿಬಿಟ್ಟರೆ ಸಿಗುತ್ತದೆಯೇ? ಇದು ಮೂಗಿಗೆ ತುಪ್ಪ ಹಚ್ಚುವ ಕೆಲಸವಾಗಿದೆ. ಹಾಗಾಗಿ, ರೈತರು ಬೆಳೆದ ಪದಾರ್ಥಗಳಿಗೂ ಬೆಲೆ ಸಿಗುತ್ತಿಲ್ಲ. ಕೋಟ್ಯಾಂತರ ರೂಪಾಯಿ ನಷ್ಟವಾಗಿದೆ. ಸಾಲ ಮನ್ನಾ ಮಾಡಿ ಎಂದು ಹೇಳಿದರೆ ಅದನ್ನೂ ಸರ್ಕಾರ

ಮಾಡುವುದಿಲ್ಲ. ಎಸ್.ಎ.ರವೀಂದ್ರನಾಥ್‌ರವರೆ, 1% ಬಡ್ಡಿ ದರದಲ್ಲಿ ರೈತರಿಗೆ 3 ಲಕ್ಷ ರೂ. ಸಾಲ ಸಿಗುತ್ತಿತ್ತು, ಅದನ್ನು ಈ ವರ್ಷದ ಬಜೆಟ್‌ನಲ್ಲಿ ಒಂದು ಲಕ್ಷ ರೂ. ಗಳಿಗೆ ಇಳಿಸಿದ್ದೀರಿ. ಅಂದರೆ zero per cent ಬಡ್ಡಿಗೆ 1 ಲಕ್ಷ ರೂ. ಎಂದು ಹೇಳಿದ್ದೀರಿ. What about the remaining amount? Where should they go? 2 ಲಕ್ಷ ರೂ. ಸಾಲ ಸಿಗುತ್ತಿದ್ದನ್ನು ಕಡಿತ ಮಾಡಿ 1 ಲಕ್ಷ ರೂ. ಅನ್ನು ಮಾತ್ರ zero per cent ಬಡ್ಡಿಯಲ್ಲಿ ಸಾಲ ಕೊಡುತ್ತೇವೆಂದರೆ, ಉಳಿದ 2 ಲಕ್ಷ ರೂ.ಗಳಿಗೆ ರೈತರು ಎಷ್ಟು per cent ಬಡ್ಡಿ ಕೊಟ್ಟು ತೆಗೆದು ಕೊಳ್ಳಬೇಕು? All the farmers are not getting the loan from the institutions. 60% of the farmers are not getting from the bank or cooperative institutions. This is the position. ಇವತ್ತು ರೈತರು ಇಷ್ಟೊಂದು ಕಷ್ಟದಲ್ಲಿ ಸಿಕ್ಕಿಹಾಕಿಕೊಂಡಿದ್ದಾರೆ. ಆತ್ಮಹತ್ಯೆ ಮಾಡಿಕೊಳ್ಳುವ ಪ್ರವೃತ್ತಿ ಬೆಳೆಯುತ್ತಿದೆ. ಇದನ್ನು ತಪ್ಪಿಸಲಿಕ್ಕೆ ಸರ್ಕಾರ ಪ್ರಯತ್ನ ಮಾಡಬೇಕೇ ಹೊರತು ಈ ತರಹ ರೈತರಿಗೆ ಅನ್ಯಾಯ ಮಾಡತಕ್ಕಂಥ, ರೈತರಿಗೆ ದ್ರೋಹ ಮಾಡತಕ್ಕಂಥ ಕೆಲಸ ಆಗಬಾರದು. ಸರ್ಕಾರ ಬಹಳ ಪ್ರಚಾರ ಕೊಟ್ಟು ಕೃಷಿ ಬಜೆಟ್ ಮಂಡಿಸಿದ್ದೇವೆ, ರೈತರಿಗೆ 19 ಸಾವಿರ ಕೋಟಿ ರೂಪಾಯಿ ಇಟ್ಟಿದ್ದೇವೆ, ಕಳೆದ ವರ್ಷ 17 ಸಾವಿರದ 800 ಕೋಟಿ ರೂಪಾಯಿಗಳನ್ನು ಇಟ್ಟಿದ್ದೆವು, ಸುವರ್ಣ ಭೂಮಿಗೆ 1 ಸಾವಿರ ಕೋಟಿ ರೂ.ಗಳನ್ನು ಇಟ್ಟಿದ್ದೇವೆಂದು ಹೇಳಿ, ಇವತ್ತಿನವರೆಗೆ ಕೇವಲ 250 ಕೋಟಿ ರೂ.ಗಳನ್ನು ಮಾತ್ರ ಬಿಡುಗಡೆ ಮಾಡಿದ್ದಾರೆ. Godown ಗಳನ್ನೂ ಕಟ್ಟುವುದಕ್ಕೆ 500 ಕೋಟಿ ರೂ.ಗಳನ್ನು ಇಟ್ಟಿದ್ದೇವೆಂದು ಹೇಳಿ, ಅದರಲ್ಲಿ ಒಂದು ರೂಪಾಯಿ ಸಹ ಖರ್ಚು ಮಾಡಿಲ್ಲ.

ಶ್ರೀ ಸಂಗಣ್ಣ ಅಮರಪ್ಪ ಕರಡಿ : ಮಾನ್ಯ ಅಧ್ಯಕ್ಷರೆ, ಕಳೆದ ಬಾರಿ ವಾಣಿಜ್ಯ ಬ್ಯಾಂಕುಗಳಿಗೆ ಕೇವಲ 50 ಸಾವಿರ ಮಾಡಿದ್ದರು, ಈ ಸಲ 1 ಲಕ್ಷದವರೆಗೆ ಸಾಲದ ಅವಕಾಶ ಮಾಡಿಕೊಟ್ಟಿದ್ದಾರೆ.

ಶ್ರೀ ಸಿದ್ದರಾಮಯ್ಯ : ಎಷ್ಟು ಜನರಿಗೆ ವಾಣಿಜ್ಯ ಸಾಲ ಸಿಗುತ್ತದೆಯೋ ಗೊತ್ತಿಲ್ಲ. Crop loan ಗೆ ಕೇಂದ್ರ ಸರ್ಕಾರ 7% ಬಡ್ಡಿ ಮಾಡಿರುವಂಥದ್ದು. ನಾನು ಇಲ್ಲಿ 2005–06ನೇ ಇಸವಿಯಲ್ಲಿ ಹಣಕಾಸಿನ ಮಂತ್ರಿಯಾಗಿದ್ದಾಗ 12.5% ಇದ್ದ ಬಡ್ಡಿಯನ್ನು 6% ಗೆ ಇಳಿಸಿದೆ. ಸವದಿಯವರೆ, ಇದರಿಂದ ಸರ್ಕಾರಕ್ಕೆ ಎಷ್ಟು burden ಆಗಿತ್ತು? The burden on the Government

was 6.5% in 2005 and 2006. ಕೇಂದ್ರ ಸರ್ಕಾರ 7% ಮಾಡಿದ ಮೇಲೆ, ಇವರು 4% ಬಡ್ಡಿಗೆ ಇಳಿಸಿದರು. 4% ನಿಂದ 3% ಗೆ ಬಂತು. 3% ನಿಂದ 1% ಗೆ ಬಂತು. ಕೇಂದ್ರ ಸರ್ಕಾರ ಈಗ 3% incentive ಕೊಡುತ್ತಿದೆ. How much you are giving from the Government treasury? ಎಷ್ಟು ಕೊಡುತ್ತಿದ್ದೀರಿ? ಏನು ಬಹಳ ದೊಡ್ಡದಾಗಿ ಬೆನ್ನು ತಟ್ಟಿಕೊಳ್ಳುವುದಕ್ಕೆ ಹೋಗಬೇಡಿ. ಆವತ್ತು ಸರ್ಕಾರದ ಬರ್ಡನ್ ಇದ್ದದ್ದು. ನಾವು 6.5% ಗೆ ಇಳಿಸಿದ್ದೆವು. ಈಗ ನಿಮಗೆ 7ರಲ್ಲಿ 3% Government of India Crop loan ಗೆ ಕೊಡುತ್ತದೆ. ಇಷ್ಟು ಉಳಿದದ್ದು ಎಷ್ಟು ಎಂದರೆ 4%. ಅದು ಎಷ್ಟಕ್ಕೆ ಕೊಡುವುದು ಒಂದು ಪಕ್ಷಕ್ಕೆ zero percent, ಇವರಿಗೆ burden ಎಷ್ಟು 3%. ಇದಕ್ಕೆ ಬೆನ್ನು ತಟ್ಟಿಕೊಳ್ಳುತ್ತೀರೋ?

ಶ್ರೀ ಎಸ್.ಎ. ರವೀಂದ್ರನಾಥ್ : ಈ ರಾಜ್ಯದಲ್ಲಿ ಸಣ್ಣ ರೈತರು 54 ಲಕ್ಷ ಜನರು ಇದ್ದಾರೆ. ಸಣ್ಣ ರೈತರೇ ಜಾಸ್ತಿ ಇರುವುದು. ಅವರಿಗೆ ನಾವು zero per cent interest ನಂತೆ ಕೊಡುತ್ತಿರುವುದು.

ಶ್ರೀ ಸಿದ್ದರಾಮಯ್ಯ : ಒಂದು ಲಕ್ಷ ಸ್ವಾಮಿ ಕೊಡುವುದು.

ಶ್ರೀ ಎಸ್. ಎ. ರವೀಂದ್ರನಾಥ್ : ಒಂದು ಲಕ್ಷವಾಗಲಿ, zero per centage ಜನ ಎಷ್ಟು ಇದ್ದಾರೆ. ನೀವು ಅದನ್ನು ಯೋಚನೆ ಮಾಡಬೇಕು.

ಶ್ರೀ ಸಿದ್ದರಾಮಯ್ಯ : ಹೋದ ಸಾರಿ ಎಷ್ಟಕ್ಕೆ ಕೊಡುತ್ತಿದ್ದೀರಿ? ಮೂರು ಲಕ್ಷದವರೆಗೆ ಕೊಡುತ್ತಿದ್ದೀರಿ. ಮೂರು ಲಕ್ಷದವರೆಗೆ ಇದ್ದಂಥ 1% interest rate ಈಗ ಒಂದು ಲಕ್ಷಕ್ಕೆ ಇಳಿಸಿದ್ದೀರಿ. ನೀವು ಬಜೆಟ್‌ನಲ್ಲಿ ಮೂರು ಲಕ್ಷಕ್ಕೆ ಇದ್ದದ್ದು ಒಂದು ಲಕ್ಷಕ್ಕೆ ಇಳಿಸಿದ್ದೀರೋ ಇಲ್ಲವೋ?

ಡಾ: ಹೆಚ್.ಸಿ. ಮಹದೇವಪ್ಪ : 1% ನಲ್ಲಿ ಮೂರು ಲಕ್ಷ ತೆಗೆದು ಕೊಳ್ಳುತ್ತಿದ್ದ benefit ಏನು? zero per cent ನಲ್ಲಿ ಒಂದು ಲಕ್ಷ ತೆಗೆದು ಕೊಂಡ ಮೇಲೆ ಇನ್ನು ಎರಡು ಲಕ್ಷಕ್ಕೆ ಎಷ್ಟು ಪರ್ಸೆಂಟ್‌ಗೆ ರೈತ ಬಡ್ಡಿಗೆ ಸಾಲ ತೆಗೆದುಕೊಳ್ಳಬೇಕು?

ಶ್ರೀ ಸಿದ್ದರಾಮಯ್ಯ : ನೋಡಿ ಇದು ಯಾವ argument ರವೀಂದ್ರನಾಥ್‌ರವರೆ?

ಶ್ರೀ ಎಸ್. ಎ. ರವೀಂದ್ರನಾಥ್ : ಸಣ್ಣ ರೈತರು ಜಾಸ್ತಿ ಇರುವುದು, ದೊಡ್ಡ ರೈತರು ಎನ್ನುವವರು, ಸಿದ್ದರಾಮಯ್ಯನಂತವರೂ, ಮಹದೇವಪ್ಪ

ನಂಥವರೂ ಕಡಿಮೆ ಇರುವುದು. ಸಣ್ಣ ರೈತರಿಗೆ ನಾವು ಆ ರೇಟ್‌ಗೆ ಕೊಡುತ್ತಿದ್ದೇವೆ.

ಶ್ರೀ ಸಿದ್ದರಾಮಯ್ಯ : ಇಲ್ಲಿ ಏನಾಗಿದೆ ಎಂದರೆ 0%. The burden on the Government will be only 4%. If it is zero per cent then the burden is only 4% Out of 7%. ಕೇಂದ್ರ ಸರ್ಕಾರ ಮತ್ತೆ 3% further incentive ಕೊಡುತ್ತದೆ. You are not paying 7% from your pocket. You are giving only 4%. ಶೇಕಡ $12^{1/2}$ ಬಡ್ಡಿ ಇದ್ದಾಗ ನಾವು ಅದನ್ನು ಶೇಕಡ 6ಕ್ಕೆ ಇಳಿಸಿದ್ದೆವು. ಅದರಿಂದ ರೈತರಿಗೆ ಏನೋ ಬಹಳ ಉದ್ಧಾರ ಮಾಡಿದ್ದೇವೆ, ಭಾರಿ ಉಪಕಾರ ಮಾಡಿದ್ದೇವೆ, ಎಂದು ನಿಮ್ಮದೇನು ಇದೆ it is not true ನೀವು ಮಾಡಿದ್ದರೆ ರೈತ ಏಕೆ ಇಷ್ಟೊಂದು ಕಷ್ಟಪಡಬೇಕಾಗಿತ್ತು? I demand, ಈಗಲಾದರೂ ಕೂಡ ಬರಗಾಲ ಇನ್ನೂ ತೀವ್ರವಾಗುತ್ತದೆ, ಕುಡಿಯುವ ನೀರಿಗೆ ತೊಂದರೆಯಾಗುತ್ತದೆ, ಬೇಸಿಗೆ ಇನ್ನೂ ಜಾಸ್ತಿಯಾಗುತ್ತದೆ, ಕುಡಿಯುವ ನೀರಿನ ಸಮಸ್ಯೆ ಇನ್ನೂ ಜಾಸ್ತಿಯಾಗುತ್ತದೆ, ನೀವು ಕುಡಿಯುವ ನೀರಿಗೆ ಹಿಂದೆ–ಮುಂದೆ ನೋಡಬಾರದು. ಹೊಸ borewell ತೊಡಿಸುವುದಕ್ಕೆ ಆಗುವುದಿಲ್ಲವೆಂದು ಹೇಳಬಾರದು. ಇವತ್ತೇ ಎಲ್ಲಾ ಜಿಲ್ಲಾಧಿಕಾರಿಗಳ ಮತ್ತು CEO ಗಳನ್ನು ಕರೆದು ಸಭೆ ಮಾಡಿ ಕುಡಿಯುವ ನೀರಿಗೆ ನಿಮಗೆ ಎಷ್ಟು ದುಡ್ಡು ಬೇಕು ಎಂದು ಕೇಳಿ ಬಿಡುಗಡೆ ಮಾಡಬೇಕು. NREGS ನಲ್ಲಿ ಕೆಲಸಕ್ಕೆ ಎಷ್ಟು ದುಡ್ಡು ಬೇಕೋ ಅಷ್ಟನ್ನು ಆ ಕಡೆಗೆ ಇಟ್ಟು ಬಿಡಿ. ಈಗ ಹೊಸದಾಗಿ ಎಷ್ಟು ಜನಕ್ಕೆ ಕೆಲಸಬೇಕಾಗಿದೆ, ಕೆಲಸ ಕೊಡುತ್ತೇವೆ ಎಷ್ಟು ದುಡ್ಡು ಬೇಕು ಎಂದು ಕೇಳಬೇಕು. ನೀವು ಯಾವುದಾದರೂ ದುಡ್ಡು ಖರ್ಚು ಮಾಡುವುದನ್ನು ನಿಲ್ಲಿಸಿ. Wasteful expenditure cut ಮಾಡಿ. ದನಕರುಗಳಿಗೆ ಮೇವು ತೆಗೆದುಕೊಂಡು ಬನ್ನಿ. ನೀವು ಹೇಳುವ ಪ್ರಕಾರ 20 ದಿನದೊಳಗೆ ಮೇವು ಇದೆ ಎನ್ನುವುದು ಸರಿಯಿಲ್ಲ. ಇದು ನಿಮ್ಮ estimate ಅಷ್ಟೆ. ಇಷ್ಟಿರಬಹುದು ಎಂದು ಹೇಳಬಹುದು, but actually in reality ಹಳ್ಳಿಗಳಲ್ಲಿ ಮೇವು ಇಲ್ಲ. ಯಾವ ಭತ್ತ ಇದೆ? ಮಾನ್ಯ ಜಗದೀಶ್ ಶೆಟ್ಟರ್ ರವರೆ, ಮೊದಲು ನಮಗೆಲ್ಲಾ ಭತ್ತದ ಹುಲ್ಲು ಸಿಗುತ್ತಿತ್ತು. ಈಗ machine cutting ಬಂದು ಒಂದು ಹಿಡಿ ಹುಲ್ಲು ನಮಗೆ ಸಿಕ್ಕುವುದಿಲ್ಲ. ಮೊದಲು manual labour ಇದ್ದಾಗ ನಾವು ಎಲ್ಲಾ ಭತ್ತ

ಕೊಯ್ಲು ಆದ ಮೇಲೆ ಹುಲ್ಲಿನ ದೊಡ್ಡ ಮೆದೆ ಹಾಕಿಕೊಳ್ಳುತ್ತಿದ್ದೆವು. ಈಗ ಎಲ್ಲಾ machine ಬಂದಿದೆ. ಒಂದು ಅಡಿ ಎತ್ತರಕ್ಕೆ ಹುಲ್ಲು ಕತ್ತರಿಸುತ್ತಾರೆ. ಇನ್ನು ಉಳಿದುಕೊಳ್ಳುವುದೆಷ್ಟು? ಅದು ಕೂಡ ನುಚ್ಚುನೂರಾಗಿ ಪುಡಿಯಾಗಿ ಬಿಡುತ್ತದೆ. ಹುಲ್ಲು ಸಿಗುವುದಿಲ್ಲ. ಈಗ ಭತ್ತದ ಹುಲ್ಲು ಇಲ್ಲ. ರಾಗಿ ಬೆಳೆಯುತ್ತಿಲ್ಲ, ಶೇಂಗಾ ಹೊರಟು ಹೋಯಿತು ಈ ಸಾರಿ ಬೆಳೆಯಲಿಲ್ಲ. ಕಬ್ಬು–ತೊಗರಿಯಾಗಲಿ ಅದನ್ನು ಮೇಯುವುದಕ್ಕೆ ಬರುತ್ತದೆಯೆ? ಯಾವ ಹುಲ್ಲು ಬೆಳೆಯುತ್ತಿದ್ದೀರಿ? ಈಗ ಯಾವ ಹುಲ್ಲು ಬೆಳೆಯುವುದಕ್ಕೆ ಇದೆ? ಏನು ಮುನಿಯಪ್ಪನವರೆ, ನೀವು ಹಳ್ಳಿಯಲ್ಲಿರುವವರು ನಿಮ್ಮ ಊರಿನಲ್ಲಿ ಮೇವು ಇದೆಯೆ? ನೀವೇ ಹೇಳಿ. This is the situation in villages. ನೀವು ಹಳ್ಳಿಗಳಿಗೆ ಹೋಗಿ ನೋಡಿ ದಯಮಾಡಿ. ಎಲ್ಲಾ ವಿಧಾನ ಸೌಧದಲ್ಲಿ, ಡೆಲ್ಲಿಯಲ್ಲಿ, ರೆಸಾರ್ಟ್‌ನಲ್ಲಿ ಕುಳಿತುಕೊಂಡರೆ ಅದು ಕಾಣುವುದಿಲ್ಲ. This is not the way of running the Government. If you can't run the Government, please resign and go out. ಈಗಲಾದರೂ ಕೂಡ ಸರ್ಕಾರ ಎಚ್ಚೆತ್ತುಕೊಳ್ಳಬೇಕು. ಮಾನ್ಯ ಅಧ್ಯಕ್ಷರೆ, ದಯವಿಟ್ಟು ನೀವಾದರೂ ಹೇಳಿ. ಅಧ್ಯಕ್ಷರೆ ಇದು ಬಹಳ ನೋವಿನ ಸಂಗತಿ. ದಯಮಾಡಿ ಸರ್ಕಾರ ಈಗಲಾದರೂ ಕೂಡ ಮಾನವೀಯತೆ ದೃಷ್ಟಿಯಿಂದ ನೋಡಬೇಕಾಗುತ್ತದೆ.

ಡಾ: ಹೆಚ್.ಸಿ. ಮಹದೇವಪ್ಪ : Sir, ಮಾನ್ಯ ಅಧ್ಯಕ್ಷರಿಗೂ ನೋವು ಇದೆ, ಆದರೆ ಹೇಳುವುದಕ್ಕೆ ಆಗುತ್ತಿಲ್ಲ.

ಶ್ರೀ ಸಿದ್ದರಾಮಯ್ಯ : ಎಲ್ಲಾ ಮಂತ್ರಿಗಳನ್ನು ಕಳುಹಿಸಿ ಸಮರೋಪಾದಿಯಲ್ಲಿ ಕೆಲಸ ಮಾಡಬೇಕು. ಯಾರೂ ಯಾರು ಮಾತುಗಳನ್ನು ಕೇಳಲ್ಲ. ಅಲ್ಲಿರುವ ಮಂತ್ರಿಗಳೇ ಮುಖ್ಯಮಂತ್ರಿಗಳ ರಾಜೀನಾಮೆ ಕೊಡಿ ಎನ್ನುತ್ತಾರೆ ಎಂದರೆ ಯಾವ ಗಂಡಾಂತರದ ಪರಿಸ್ಥಿತಿ ಬಂತು ನೋಡಿ ಪ್ರಜಾಪ್ರಭುತ್ವಕ್ಕೆ. His own ministers appointed by the Chief Minister, Cabinet colleagues, they are demanding his resignation. Never in the history of democracy, never in the country, nowhere in the world.

ಡಾ: ಹೆಚ್.ಸಿ. ಮಹದೇವಪ್ಪ : Ministers resign ಮಾಡಿಬಿಟ್ಟು ಆಮೇಲೆ Chief Minister resignation ಕೊಡಿಸಬೇಕು ಎಂದು ಹೇಳಬೇಕು.

ಶ್ರೀ ಸಿದ್ದರಾಮಯ್ಯ : That is what the democracy demands.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ : ಮಾನ್ಯ ವಿರೋಧ ಪಕ್ಷದ ನಾಯಕರೆ, 1989ರಲ್ಲಿ 186 ಜನ ಕಾಂಗ್ರೆಸ್ಸಿನ ಎಂಎಲ್ಎ ಗಳು ಗೆದ್ದು ಮೂರು ಮುಖ್ಯಮಂತ್ರಿಗಳಾಗಿ, ಮಂತ್ರಿ, ಮುಖ್ಯಮಂತ್ರಿಗಳನ್ನು ಹೊಡೆಯುವುದಕ್ಕೆ ಹೋದಂಥ ನಿದರ್ಶನ ಕಾಂಗ್ರೆಸ್‌ನಲ್ಲಿದೆ. ನೀವು ಏಕೆ ಹೇಳುವುದಕ್ಕೆ ಹೋಗುತ್ತೀರಿ? ಸರಕಾರ ಅಧಿಕಾರಕ್ಕೆ ಬಂದಾಗ ಒಂದು ರೀತಿ, ಅಧಿಕಾರ ಇಲ್ಲದಿದ್ದಾಗ ಒಂದು ರೀತಿ, ಎಲ್ಲರಿಗೂ ಗೊತ್ತಿರುವ ವಿಚಾರ.

ಶ್ರೀ ಸಿದ್ದರಾಮಯ್ಯ : ನಾನು ಇಲ್ಲಿ ಎಂಎಲ್ಎ ಆಗಿರುವಾಗ, ಮಂತ್ರಿಯಾಗಿರುವಾಗ ಇಂಥ ಸನ್ನಿವೇಶ ಇಂಥ ರಾಜಕೀಯ ಬೆಳವಣಿಗೆಗಳನ್ನು ನನ್ನ ಜೀವನದಲ್ಲಿ ನೋಡಿರಲಿಲ್ಲ. ನನ್ನ ಅನುಭವದಲ್ಲಿ ಈ ರೀತಿ ಆಗಿರಲಿಲ್ಲ, ನಾಚಿಕೆಯಾಗುತ್ತದೆ. ಹನ್ನೊಂದು ಜನ ಮಂತ್ರಿಗಳು ಯಾವ ಸರ್ಕಾರದಲ್ಲಿ ರಾಜೀನಾಮೆ ಕೊಟ್ಟಿದ್ದರು ಸ್ವಾಮಿ? ಅದನ್ನು ಹೇಳುತ್ತೀರಾ? ಯಾವ ಕಾಲದಲ್ಲಿ? ರವಿ, ನಾನು ಒಂದು ನಿಮಿಷದಲ್ಲಿ ಮುಗಿಸಿಬಿಡುತ್ತೇನೆ, ಆಮೇಲೆ ತಾವು ಹೇಳಿ. ತಾವು ಕುಳಿತುಕೊಳ್ಳಿ.

ಶ್ರೀ ಸಿ.ಟಿ. ರವಿ : ಒಂದು ನಿಮಿಷ ಅವಕಾಶ ಕೊಡಿ. ತಾವು ಉಪ ಮುಖ್ಯಮಂತ್ರಿಯಾಗಿದ್ದವರು ಮತ್ತು ಶಾಸಕಾಂಗ ಪಕ್ಷದ ನಾಯಕರು. ತಮ್ಮನ್ನು ತಮಗೆ ಗೊತ್ತಿಲ್ಲದ ಹಾಗೆ ಇನ್ನೊಬ್ಬ ಶಾಸಕರು ರೆಸಾರ್ಟ್‌ಗೆ ಕರೆದುಕೊಂಡು ಹೋಗಿ ತಮ್ಮ ವಿರುದ್ಧ ಪಿತೂರಿ ಮಾಡಿದರು. ನೀವು ಅದನ್ನು ಬಹಿರಂಗವಾಗಿ ಗೋಳಾಡಿದಿರಿ. ನೀವು ಜನತಾ ದಳದಲ್ಲಿ ಇದ್ದಾಗ ತಾವು ಉಪ ಮುಖ್ಯಮಂತ್ರಿ ಮತ್ತು ಶಾಸಕಾಂಗ ಪಕ್ಷದ ನಾಯಕರು. ನಿಮಗೆ ಗೊತ್ತಿಲ್ಲದ ಹಾಗೆ ಶಾಸಕರ ಸಭೆ ಪ್ರತ್ಯೇಕವಾಗಿ ನಡೆಯುತ್ತೆ. ನೀವು ಹೇಳಿದ ಮಾತು. ನೀವು ಶಾಸಕರಲ್ಲ ಎಂದು ನೀವೇ ಹೇಳಿದ ಮಾತು..

(ಗೊಂದಲ)

ಶ್ರೀ ಎಸ್. ಸಿದ್ದರಾಮಯ್ಯ : ಪಾಪ ಅವರಿಗೆ ಮಾಹಿತಿ ಸಿಕ್ಕಿಲ್ಲ. ಅವರಿಗೆ ಕುಳಿತುಕೊಳ್ಳುವುದಕ್ಕೆ ಹೇಳಿ. ಆಮೇಲೆ ಹೇಳಿಕೊಳ್ಳಲಿ.

(ಗೊಂದಲ)

ಅಧ್ಯಕ್ಷರು : Please ಕುಳಿತುಕೊಳ್ಳಿ. ಶಿವಲಿಂಗೇಗೌಡರವರೆ, ಕುಳಿತುಕೊಳ್ಳಿ. ಜೀವರಾಜ್‌ರವರೆ, ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಆಯಿತು. ಕುಳಿತುಕೊಳ್ಳಿ ಜೀವರಾಜ್.

(ಗೊಂದಲ)

ಅಧ್ಯಕ್ಷರು : ರುದ್ರೇಶ್‌ಗೌಡರವರೆ, ಪ್ರತಿ ಸಲ ಹೇಳುವುದು ಬೇಡ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಜೀವರಾಜ್‌ರವರೆ, ಕುಳಿತುಕೊಳ್ಳಿ. ನಿಮ್ಮ ಕ್ಷೇತ್ರದಲ್ಲಿಯೇ ನಮಗೆ 6 ರಿಂದ 7 ಸಾವಿರ ಲೀಡ್ ಬಂದಿದೆ. ಪುನಃ ಪುನಃ ನೀವು ಅದೇ ಹೇಳುತ್ತೀರಿ.

(ಗೊಂದಲ)

ಶ್ರೀ ಎಸ್. ಶಿವಣ್ಣ : ಆಗ ನೀವು ಕಬಡ್ಡಿ ಆಡುವುದಕ್ಕೆ ಹೋಗಿ knee ಇರಲಿಲ್ಲ.

ಶ್ರೀ ಸಿದ್ದರಾಮಯ್ಯ : ಎಲ್ಲಾ ಗೊತ್ತಾಗಿದೆ ಬಿಡಿ. ಅದೇನೂ ಜಗತ್ತಿಗೇ ಗೊತ್ತಿದೆ ನೀವೇನು ಹೇಳುವುದು ಶಿವಣ್ಣ? ನೋಡಿ ಮಾನ್ಯ ಅಧ್ಯಕ್ಷರೆ ನನಗೆ ಆ ತರಹ ಆದ ತಕ್ಷಣವೇ ನಾನು ನಮ್ಮ ಎಲ್ಲಾ 8–9 ಜನ ಎಂಎಲ್‌ಎ ಗಳು ಹೊರಗಡೆ ಬಂದುಬಿಟ್ಟೆವು. ಪಾಪ ಅದು ಅವರಿಗೆ ಗೊತ್ತಿಲ್ಲ. ನಾವು ಹೊರಗಡೆ ಬಂದು ಬಿಟ್ಟೆವು. ಈಗ Chief Minister ನ್ನು ರಾಜೀನಾಮೆ ಕೊಡು ಎಂದು ಹೇಳುತ್ತಾರೆ. His own colleagues, Members of Council of Ministers. ಇನ್ಯಾರಾದರೂ ಆಗಿದ್ದರೆ ರಾಜೀನಾಮೆ ಕೊಟ್ಟು ಹೋಗುತ್ತಿದ್ದರು. ಅಥವಾ ಆ ಮಂತ್ರಿಗಳನ್ನು dismiss ಮಾಡಬೇಕಾಗಿತ್ತು. ಮಾಡಿದ್ದಾರೆಯೆ? ಯಾರು ರಾಜೀನಾಮೆ ಕೇಳುತ್ತಾರೆ ಅವರನ್ನು shock ಮಾಡಬೇಕಾಗಿತ್ತು.

(ಗೊಂದಲ)

ಅಧ್ಯಕ್ಷರು : ಕುಳಿತುಕೊಳ್ಳಿ, ಅಶೋಕ್. Please.

ಶ್ರೀ ಎಸ್. ಶಿವಣ್ಣ : ಆಗ ರೆಸಾರ್ಟ್‌ಗಳು ಇರಲಿಲ್ಲ.

ಶ್ರೀ ಸಿದ್ದರಾಮಯ್ಯ : ಈಗಲಾದರೂ ಕೂಡ I demand, ಮಾನ್ಯ ಜಗದೀಶ್ ಶೆಟ್ಟರೆ, ದಯಮಾಡಿ ಈ ಕಡೆಗೆ ನೋಡಿ. ನಾನು ಈಗ ಹೇಳಿದ್ದೆಲ್ಲಾ ಹೊಳೆಯಲ್ಲಿ ಹುಣಸೆ ಹಣ್ಣು ತೇಯಿದಂಗೆ ಆಯಿತು. ಒಬ್ಬರೂ ನಾನು ಹೇಳಿದ ಒಂದು point ನ್ನು ಬರೆದುಕೊಂಡಿಲ್ಲ. ಎಲ್ಲಾ ಸುಮ್ಮನೆ

ಕುಳಿತ್ತಿದ್ದಾರೆ. ಆ ದಿವಸ ಮಾತನಾಡುವಾಗ blue film ನೋಡುತ್ತಾ ಕುಳಿತ್ತಿದ್ದರು. ಈ ದಿವಸ ಸುಮ್ಮನೆ ನನ್ನ ಮುಖ ನೋಡುತ್ತಾ ಕುಳಿತಿದ್ದಾರೆ! ಏನ್ರೀ ಈ ರಾಜ್ಯಕ್ಕೆ ಇಂತಹ ಪರಿಸ್ಥಿತಿ ಬಂತಲ್ಲರೀ? ಇಂಥ ಅಧೋಗತಿ, ರಾಜಕೀಯ ದುಸ್ಥಿತಿ, ಅಸ್ಥಿರವಾದ ಸರ್ಕಾರ ಯಾವ ಕಾಲದಲ್ಲಿಯಾದರೂ ಇತ್ತೆ ಮಾನ್ಯ ಅಧ್ಯಕ್ಷರೆ? ದಯಮಾಡಿ ಈಗಲಾದರು ಎಚ್ಚೆತ್ತುಕೊಳ್ಳಬೇಕು. ನೀವಂತೂ ರಾಜೀನಾಮೆ ಕೊಡುವವರಲ್ಲ, ಭಂಡಬಿದ್ದುಬಿಟ್ಟಿದ್ದೀರಿ. ಹೋಗಲಿ ಪಾಪ ಆ ರೈತರಿಗೆ ಸ್ವಲ್ಪ ಸಹಾಯ ಮಾಡಿ, ಕುಡಿಯುವ ನೀರಿಗೆ, ಮೇವಿಗೆ ಮುಂತಾದವುದಕ್ಕೆ ಈಗಲೇ ಉಪ ಸಮಿತಿಗಳನ್ನು ಮಾಡಿಕೊಂಡು ಎಲ್ಲಾ ಹಳ್ಳಿಗಳಿಗೆ, ತಾಲ್ಲೂಕುಗಳಿಗೆ, ಜಿಲ್ಲೆಗಳಿಗೆ ಹೋಗಿ ಅವರ ಕಷ್ಟಸುಖ ಕೇಳಿ ಎಂದು ನಾನು ಒತ್ತಾಯ ಮಾಡುತ್ತೇನೆ.

11. 2012ನೇ ಮಾರ್ಚ್‌ನಲ್ಲಿ ನಡೆಯುತ್ತಿರುವ ದ್ವಿತೀಯ ಪಿ.ಯು.ಸಿ. ಪರೀಕ್ಷೆಯ ಗಣಿತ ಮತ್ತು ಭೌತಶಾಸ್ತ್ರ ಪ್ರಶ್ನೆ ಪತ್ರಿಕೆಗಳು ಪರೀಕ್ಷೆ ಪ್ರಾರಂಭವಾಗುವ ಮೊದಲೇ ಬಹಿರಂಗವಾದ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳ ಕುರಿತು ಸರ್ಕಾರದ ಹೇಳಿಕೆ :

ಅಧ್ಯಕ್ಷರು : ವಿಶ್ವೇಶ್ವರ ಹೆಗಡೆಯವರು, ನೀವು Statement ಮಾಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) : ಮಾನ್ಯ ಸಭಾಧ್ಯಕ್ಷರೆ, ಇದುವರೆಗೂ ವಿಧಾನ ಪರಿಷತ್ತಿನಲ್ಲಿ ಪ್ರಶ್ನೆಪತ್ರಿಕೆಗಳ ಬಹಿರಂಗವಾಗಿರುವ ವಿಷಯಗಳ ಕುರಿತಂತೆ ಸುದೀರ್ಘ ವಾದಂಥ ಚರ್ಚೆ ಮತ್ತು ಸರ್ಕಾರದ ಕಡೆಯಿಂದ ನನ್ನ ಉತ್ತರವನ್ನು ನಾನು ಕೊಟ್ಟಿದ್ದೇನೆ ತಾವು ಅದನ್ನು ಉಲ್ಲೇಖ ಮಾಡಿದಾಗಲೂ ಅಲ್ಲಿ ಅದೇ ಚರ್ಚೆ ನಡೆಯುತ್ತಿತ್ತು.

ಶ್ರೀ ಸಿದ್ದರಾಮಯ್ಯ : ಅದರ ಪ್ರತಿ ಕೊಡಿ. ನಮಗೆ ಇನ್ನೂ ಬಂದಿಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಒಂದು ನಿಮಿಷದಲ್ಲಿ ಕಾಪಿ ಕೊಡುತ್ತೇನೆ. ಕಾಪಿ ರೆಡಿ ಇದೆ. ಎಲ್ಲರಿಗೂ ಕಾಪಿ ಕೊಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) : ಗಣಿತ ಮತ್ತು ಭೌತಶಾಸ್ತ್ರ ಪರೀಕ್ಷೆಗಳ ಪ್ರಶ್ನೆ ಪತ್ರಿಕೆ ಬಹಿರಂಗಗೊಂಡು ವಿದ್ಯಾರ್ಥಿಗಳು ಮತ್ತು ಪಾಲಕರಿಗೆ ಆತಂಕ ಉಂಟು ಮಾಡಿದ ಈ ಘಟನೆಯ ಬಗ್ಗೆ ವಿಷಾದ ವ್ಯಕ್ತಪಡಿಸುತ್ತೇನೆ.